# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಮಂಗಳವಾರ, ಆಗಸ್ಟ್ 27, 2024

ಸಂಪುಟ : 51 ಸಂಚಿಕೆ : 105 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಇತಿಹಾಸ ಪ್ರಸಿದ್ಧ ಆನೆಕೊಂಡದಲ್ಲಿ ಕಾರಣಿಕ ಸಂಭ್ರಮ

**ರಾಮ ರಾಮ ಎಂದು ನುಡಿದೀತಲೇ..**
**ನರ ಲೋಕದ ಜನಕೆ ಆನೆ ತಣ್ಣೀರು ಉಗ್ಗಿತಲೇ..**
**ಮುತ್ತೈದರ ಭೂತಾಯಿ ಉಡಿ ತುಂಬಿರಲೆ..**
**ನರ ಲೋಕದ ಜನಕೆ ದೃಷ್ಟಿ ಹುಚ್ಚಾದಿತಲೇ..**

ದಾವಣಗೆರೆ, ಆ.26- ಇಲ್ಲಿನ ಇತಿಹಾಸ ಪ್ರಸಿದ್ಧ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ಜಾತ್ರೆ ಅಂಗವಾಗಿ ನಡೆದ ಮಹೋತ್ಸವ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಶ್ರಾವಣ ಮಾಸದ ಕಡೇ ಸೋಮವಾರವಾದ ಇಂದು ಸಂಜೆ ನೆರವೇರಿತು.

ಹೂಗಳಿಂದ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಬಾತಿ ಸಮೀಪದ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿಯೊಂದಿಗೆ ಸಂಜೆ ಕುದುರೆ ಮೆರವಣಿಗೆ ಮೇಲೆ, ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ, ಬೇತೂರು ರಸ್ತೆಯ ಶ್ರೀ ವೆಂಕಟೇಶ್ವರ ಸ್ವಾಮಿ ಒಳಗೊಂಡು ಸುತ್ತಮುತ್ತಲ ದೇವರನ್ನು ಕರೆ ತರುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಇನ್ನು ಪ್ರತಿ ವರ್ಷದ ಪದ್ಧತಿಯಂತೆ ಆನೆಕೊಂಡದ ಪುರಾತನ ಬಾವಿಯಲ್ಲಿ ಸ್ನಾನ ಮಾಡಿ, ದೇವಸ್ಥಾನ ಬಳಿ ಸಿದ್ಧಗೊಂಡ ವೇದಿಕೆಯಲ್ಲಿ ದಾಸಪ್ಪನವರು ಈ ಕಾರಣಿಕ ನುಡಿದಿದ್ದನ್ನು ನೆರೆದಿದ್ದ ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ಅಲ್ಲದೇ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡರು.

ದೇವಸ್ಥಾನಕ್ಕೆ ಕುಟುಂಬ ಸಮೇತ ಆಗಮಿಸಿದ ಭಕ್ತರು ದೇವರಿಗೆ ಹಣ್ಣು-ಕಾಯಿ ಸಮರ್ಪಿಸಿ ಪೂಜೆ ಸಲ್ಲಿಸಿದರು. ಕಾರಣಿಕ ಮಹೋತ್ಸವಕ್ಕೆ ಬಂದ ದೇವರುಗಳಿಗೆ ಕೈಮುಗಿದು ಭಕ್ತಿಯಿಂದ ಪ್ರಾರ್ಥಿಸಿದರು. ಕುಟುಂಬದವರು ಮಕ್ಕಳೊಂದಿಗೆ ಜಾತ್ರೆಯಲ್ಲಿ ಭಾಗವಹಿಸಿ (3ನೇ ಪುಟಕ್ಕೆ)

# ದರ್ಶನ್‌ಗೆ ಜೈಲಲ್ಲಿ ರಾಜಾತಿಥ್ಯ

## ಜೈಲು ಮುಖ್ಯ ಅಧೀಕ್ಷಕ ಸೇರಿ 9 ಅಧಿಕಾರಿಗಳ ಅಮಾನತ್ತು

ಬೆಂಗಳೂರು, ಆ. 26 - ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್‌ಗೆ ರಾಜಾತಿಥ್ಯ ನೀಡಿರುವ ಕಾರಾಗೃಹದ ಒಂಭತ್ತು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ. ಜೈಲಿನ ಮುಖ್ಯ ಅಧೀಕ್ಷಕ ವಿ. ಶೇಷಮೂರ್ತಿ ಹಾಗೂ ಜೈಲಿನ ಅಧೀಕ್ಷಕ ಮಲ್ಲಿಕಾರ್ಜುನ ಸ್ವಾಮಿ ಸಹ ಅಮಾನತ್ತುಗೊಂಡವರಲ್ಲಿ ಸೇರಿದ್ದಾರೆ.

ಶರಣಬಸವ ಅಮೀನ್‌ಗಢ, ಪ್ರಭು ಎಸ್. ಖಂಡೇಲವಾಲ್, ಎಲ್.ಎಸ್.ತಿಪ್ಪೇಸ್ವಾಮಿ, ಶ್ರೀಕಾಂತ್ ತಳವಾರ, ವೆಂಕಪ್ಪಕೊರ್ತಿ, ಸಂಪತ್ ಕುಮಾರ್ ಕಡಪಟ್ಟಿ ಹಾಗೂ ಬಸಪ್ಪ ತೇಲಿ ಅವರು ಅಮಾನತ್ತುಗೊಂಡ ಇತರೆ ಸಿಬ್ಬಂದಿ.

ಅಲ್ಲದೆ, ಈ ಎಲ್ಲ ಆರೋಪಿಗಳನ್ನು ವಿವಿಧ ಜೈಲುಗಳಿಗೆ ಸ್ಥಳಾಂತರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ.

ರೌಡಿಶೀಟರ್‌ಗಳ ಜೊತೆ ಕುಳಿತು ನಟ ದರ್ಶನ್ ಐಷಾರಾಮಿ ಕ್ಷಣಗಳನ್ನು ಕಳೆಯುತ್ತಿರುವ ದೃಶ್ಯಗಳು ಮಾಧ್ಯಮಗಳಲ್ಲಿ ವೈರಲ್ ಆಗಿರುವುದನ್ನು ಗಮನಸಿದ ಮುಖ್ಯಮಂತ್ರಿ, ಕೆಂಡಾಮಂಡಲರಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಗೃಹ ಕಚೇರಿಗೆ ಕರೆಸಿಕೊಂಡ ಮುಖ್ಯಮಂತ್ರಿ ಅವರು, ಪರಪ್ಪನ ಅಗ್ರಹಾರದಲ್ಲಿನ ಅಕ್ರಮ



**ರೌಡಿಶೀಟರ್‌ಗಳ ಜೊತೆ ಕುಳಿತು ನಟ ದರ್ಶನ್ ಐಷಾರಾಮಿ ಕ್ಷಣ ಕಳೆಯುತ್ತಿರುವ ದೃಶ್ಯಗಳು ಮಾಧ್ಯಮ ಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ತರಾಟೆ**

ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಿದ್ದಲ್ಲದೆ, ಈ ಎಲ್ಲ ಆದೇಶಗಳನ್ನು ಸ್ಥಳದಲ್ಲೇ ನೀಡಿದ್ದಾರೆ.

ಅಷ್ಟೇ ಅಲ್ಲದೆ, ಗೃಹ ಸಚಿವರು ಮತ್ತು ಪೊಲೀಸ್ ಮಹಾನಿದೇರ್ಶಕರಿಗೆ ತಕ್ಷಣವೇ ಪರಪ್ಪನ ಅಗ್ರಹಾರಕ್ಕೆ ತೆರಳಿ ಅಲ್ಲಿನ ಸ್ಥಿತಿಗತಿಗಳನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಲ್ಲದೆ, ಮುಂದೆ ಇಂತಹ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ ಎಂದು ಆದೇಶಿಸಿದರು. ನಂತರ ಗೃಹ ಸಚಿವರು ತಮ್ಮ ವಿಧಾನಸೌಧದ ಕಚೇರಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಸಭೆ ನಡೆಸಿ, ಪರಪ್ಪನ ಅಗ್ರಹಾರಕ್ಕೆ ತೆರಳಿದರು.

ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ಆಗಸ್ಟ್ 22ರ ಸಂಜೆ ನಡೆದ ಈ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು ಎಂದರು.

ನಟ ದರ್ಶನ್ ಘಟನೆ ಬೆನ್ನಲ್ಲೇ ಕಾರಾಗೃಹಗಳ ಡಿಜಿ ಮಾಲಿನಿ ಕೃಷ್ಣಮೂರ್ತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅಮಾನತ್ತುಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದರು.

ಇಂತಹ ಬೆಳವಣಿಗೆಗಳು ನಡೆಯಬಾರದಿತ್ತು, ವಿಷಯ ಬಹಿರಂಗವಾಗುತ್ತಿದ್ದಂತೆ, ಅಧಿಕಾರಿಗಳು ತತ್‌ಕ್ಷಣ ಕ್ರಮ ಕೈಗೊಂಡಿದ್ದಾರೆ. 2 ದಿನಗಳ ಹಿಂದೆಯಷ್ಟೇ ಹಿರಿಯ ಪೊಲೀಸ್ ಅಧಿಕಾರಿಗಳು ಪರಪ್ಪನ ಅಗ್ರಹಾರಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು, ಆ ವೇಳೆ ಯಾವುದೇ ಮೊಬೈಲ್ ಹಾಗೂ ಇನ್ನಿತರೆ ವಸ್ತುಗಳು ದೊರೆತಿರಲಿಲ್ಲ ಎಂದು ಪರಮೇಶ್ವರ್ ಹೇಳಿದರು.

ಎಲ್ಲಾ ಜೈಲುಗಳಲ್ಲಿಯೂ ಮೊಬೈಲ್ ಜಾಮರ್‌ಗಳು ಮತ್ತು ಸಿಸಿಟಿವಿ ಕ್ಯಾಮೆರಾಗಳಿವೆ. ಇದೆಲ್ಲದರ ನಡುವೆಯೂ ಘಟನೆ ನಡೆದಿದ್ದು, ಮುಂದೆ ಇಂತಹ ಘಟನೆಗಳು (3ನೇ ಪುಟಕ್ಕೆ)

# ವೈಟ್ನರ್ ಸಾಲು ಮೇಲೆ 'ಬೆಳಕು' ಚೆಲ್ಲಿದ ಸಿಎಂ

ಬೆಂಗಳೂರು, ಆ. 26 - ಮುಡಾ ಜಮೀನು ಪಡೆಯುವುದಕ್ಕೆ ಸಂಬಂಧಿಸಿದಂತೆ ತಮ್ಮ ಪತ್ನಿ ಪಾರ್ವತಮ್ಮ ಬರೆದ ಪತ್ರದಲ್ಲಿ ವೈಟ್ನರ್ ಹಚ್ಚಿದ ಬಗ್ಗೆ ಸ್ಪಷ್ಟನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ' ಎಂಬ ನಾಲ್ಕೈದು ಪದಗಳಿಗೆ ವೈಟ್ನರ್ ಹಾಕಲಾಗಿದೆ ಎಂದಿದ್ದಾರೆ.

**ಬದಲಿ ಜಮೀನು ನೀಡುವಂತೆ ಕೋರಲಾಗಿತ್ತು ಎಂದು ಸ್ಪಷ್ಟನೆ**

ಮುಡಾ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡ ನಮ್ಮ ಕುಟುಂಬದ ಜಮೀನಿಗೆ ಬದಲಿ ಭೂಮಿ ನೀಡುವಂತೆ ನನ್ನ ಪತ್ನಿ ಸಲ್ಲಿಸಿದ್ದ ಅರ್ಜಿಯಲ್ಲಿ ನಾಲ್ಕೈದು ಪದಗಳಿಗೆ ವೈಟ್ನರ್ ಹಚ್ಚಿದನ್ನೇ ಮಹಾನ್ ಅಪಾರಾಧವೆಂಬಂತೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಹೇಳುತ್ತಿದ್ದಾರೆ ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ. ವೈಟ್ನರ್ ಹಚ್ಚಿದ ಸಾಲುಗಳ ಮೇಲೆ ಟಾರ್ಚ್ (4ನೇ ಪುಟಕ್ಕೆ)

## ಖರ್ಗೆ ಪುತ್ರನ ಟ್ರಸ್ಟ್‌ಗೆ ಜಮೀನು; ಸರ್ಕಾರದ ಸಮರ್ಥನೆ

ಬೆಂಗಳೂರು, ಆ. 26 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿ 14 ಬಿಡಿ ನಿವೇಶನ ಪಡೆದ ಪ್ರಕರಣದ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ರಾಹುಲ್ ಎಂ. ಖರ್ಗೆ ಅವರಿಗೆ ಕೈಗಾರಿಕಾ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳಿಗೆ ಮೀಸಲಿಟ್ಟ ಸ್ಥಳದಲ್ಲಿ ಐದು ಎಕರೆ ಜಮೀನನ್ನು ಸರ್ಕಾರ ನೀಡಿದೆ.

**ಕಾನೂನು ಪ್ರಕಾರವೇ ನಿಗದಿತ ಬೆಲೆಗೆ ನೀಡಲಾಗಿದೆ - ಎಂ.ಬಿ. ಪಾಟೀಲ್**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಹಂಚಿಕೆಯಾಗಿರುವ ವಿಸ್ತೀರ್ಣದಲ್ಲಿ ರಾಹುಲ್ ಖರ್ಗೆ ಟ್ರಸ್ಟಿ ಆಗಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿನಲ್ಲಿ ಈ (2ನೇ ಪುಟಕ್ಕೆ)



# ಕರ್ತವ್ಯ ನಿರತ ವೈದ್ಯರ ಮೇಲೆ ಹಲ್ಲೆಗೆ ಖಂಡನೆ

## ರಕ್ಷಣೆಗೆ ಆಗ್ರಹಿಸಿ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಂದ ಧರಣಿ, ಸತ್ಯಾಗ್ರಹ

ದಾವಣಗೆರೆ, ಆ.26- ಕರ್ತವ್ಯ ನಿರತ ವೈದ್ಯರ ಮೇಲೆ ಹಲ್ಲೆ ನಡೆಸಿದ ಹಿನ್ನೆಲೆಯಲ್ಲಿ ಸೂಕ್ತ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಹಾಗೂ ಸಂಶೋಧನಾಕೇಂದ್ರ ಮತ್ತು ಬಾಪೂಜಿ ರಕ್ತನಿಧಿ ಕೇಂದ್ರದ ಮುಂಭಾಗ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಧರಣಿ ಸತ್ಯಾಗ್ರಹ ನಡೆಸಿದರು.

ಶುಕ್ರವಾರ ಮಧ್ಯ ರಾತ್ರಿ ರವಿಕುಮಾರ್ ಎಂಬುವರು ತನ್ನ ತಾನ್ವಿ ಎಂಬ ನಾಲ್ಕು ವರ್ಷದ ಮಗಳನ್ನು ಅನಾರೋಗ್ಯದ ನಿಮಿತ್ಯ ಬಾಪೂಜಿ ಮಕ್ಕಳ ಆಸ್ಪತ್ರೆಗೆ ದಾಖಲಿಸಿದ್ದರು. ಆರೋಗ್ಯದಲ್ಲಿ ತೀವ್ರ ಏರುಪೇರು ಆದಾಗ ತಕ್ಷಣ ಕರ್ತವ್ಯ ನಿರತ ವೈದ್ಯರು ತೀವ್ರ ನಿಗಾ ಘಟಕ (ಐಸಿಯು)ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮಗು ಸಾವನ್ನಪ್ಪಿದೆ. ಇದರಿಂದ ಕುಪಿತಗೊಂಡ

**ಸ್ಥಳಕ್ಕೆ ಎಸ್ಪಿ ಉಮಾ ಪ್ರಶಾಂತ್ ಭೇಟಿ, ಬಾಪೂಜಿ ಆಸ್ಪತ್ರೆ ಬಳಿಯ ಗೂಡಂಗಡಿಗಳನ್ನು ರಾತ್ರಿ 10 ಗಂಟೆಗೆ ಮುಚ್ಚಿಸಲೂ ಸೂಚನೆ**

ಮಗುವಿನ ತಂದೆ ರವಿಕುಮಾರ್ ವೈದ್ಯರ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಹಲ್ಲೆ ಹಿನ್ನೆಲೆಯಲ್ಲಿ ಸ್ನಾತಕೋತ್ತರ ವೈದ್ಯಕೀಯ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳು ನೀಡಿದ ದೂರಿನನ್ವಯ ರವಿಕುಮಾರ್ ಅವರನ್ನು ಬಂಧಿಸಿದ್ದಾರೆ.

ನಂತರ ಬೇಲ್ ಮೇಲೆ ಬಿಡುಗಡೆ ಕೂಡ ಆಗಿದ್ದಾರೆ. ಆದರೂ ವೈದ್ಯರು ನಮಗೆ ಸೂಕ್ತ ರಕ್ಷಣೆ ಇಲ್ಲ. ಕೂಡಲೇ ರಕ್ಷಣೆ ಭರವಸೆ ನೀಡಬೇಕು. ಆರೋಪಿಗೆ ಸರಿಯಾದ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು.

ಮುಂದಿನ ಸೂಕ್ತ ರಕ್ಷಣೆಯ ಭರವಸೆ ಸಿಗುವವರೆಗೂ ನಾಳೆ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಧರಣಿ ಮುಂದುವರೆಸುವುದಾಗಿ ಪ್ರತಿಭಟನಾನಿರತರು ತಿಳಿಸಿದರು. ಇಂದು ಬಾಪೂಜಿ ಮಕ್ಕಳ ಆಸ್ಪತ್ರೆಯ ಓಪಿಡಿ ಬಂದ್ ಮಾಡುವ ಮೂಲಕ ಧರಣಿ ಸತ್ಯಾಗ್ರಹದಿಂದ ರೋಗಿಗಳಿಗೆ ತುಸು ಅಡಚಣೆ ಉಂಟಾಯಿತು.

ಸ್ಥಳಕ್ಕೆ ಆಗಮಿಸಿದ ಎಸ್ಪಿ ಉಮಾ ಪ್ರಶಾಂತ್ ಅವರು ವೈದ್ಯರ ರಕ್ಷಣೆ ಹಿನ್ನೆಲೆಯಲ್ಲಿ ಆಸ್ಪತ್ರೆ ಎದುರಿಗಿರುವ ಗೂಡಂಗಡಿಗಳನ್ನು ರಾತ್ರಿ 10 ಗಂಟೆಗೆ ಮುಚ್ಚಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಆಸ್ತಿ ನೋಂದಣಿಗೆ ಆಧಾರ್ ಕಡ್ಡಾಯಗೊಳಿಸಿ ಆದೇಶ

ಬೆಂಗಳೂರು, ಆ. 26 - ಜಮೀನು ಮಾಲೀಕತ್ವದ ಸುರಕ್ಷತೆ ಹಾಗೂ ವಂಚನೆ ಪ್ರಕರಣಗಳನ್ನು ತಪ್ಪಿಸಲು ಇನ್ನು ಮುಂದೆ ಆಸ್ತಿ ನೋಂದಣಿ ಸಂದರ್ಭದಲ್ಲಿ ಆಧಾರ್ ಕಾರ್ಡ್ ದಾಖಲೆ ಕಡ್ಡಾಯಗೊಳಿಸಿ ಸರ್ಕಾರ ಇಂದಿಲ್ಲಿ ಆದೇಶ ಮಾಡಿದೆ.

**ಜಮೀನು ಮಾಲೀಕತ್ವದ ಸುರಕ್ಷತೆ ಹಾಗೂ ವಂಚನೆ ತಪ್ಪಿಸಲು ಸರ್ಕಾರದ ಕ್ರಮ**

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಂದಾಯ ಸಚಿವ ಕೃಷ್ಣಭೈರೇಗೌಡ, ಸೆಪ್ಟೆಂಬರ್ 2ರಿಂದ ಆಯಾ ಜಿಲ್ಲೆಯ ಯಾವುದೇ ನೋಂದಣಿ ಕಚೇರಿಯಲ್ಲಿ ನೋಂದಣಿಗೆ ಅವಕಾಶ ಮಾಡಕೊಡಲಾಗುತ್ತಿದೆ ಎಂದರು.

ನೋಂದಣಿ ವೇಳೆ ಆಧಾರ್ ಕಾರ್ಡ್ ಇಲ್ಲದಿದ್ದರೆ ಪಾಸ್‌ಪೋರ್ಟ್ ಅಥವಾ ಪ್ಯಾನ್ ಕಾರ್ಡ್ ದಾಖಲೆಗಳನ್ನು ಒದಗಿಸಿದರಷ್ಟೇ ನೋಂದಣಿ ಮಾಡಲಾಗುತ್ತದೆ ಎಂದು ಹೇಳಿದರು.

ಆಸ್ತಿ ಮಾಲೀಕತ್ವ ಸುರಕ್ಷೆ ಮಾಡುವುದು, ದರೋಡೆ ತಪ್ಪಿಸುವ ಉದ್ದೇಶದಿಂದ ಈ ದಾಖಲೆಗಳನ್ನು ಕಡ್ಡಾಯ ಮಾಡಲಾಗಿದೆ. ರಾಜ್ಯದಲ್ಲಿ (4ನೇ ಪುಟಕ್ಕೆ)

## ದೂರು ಇತ್ಯರ್ಥ ಅವಧಿ 21 ದಿನಕ್ಕೆ ಇಳಿಕೆ

ನವದೆಹಲಿ, ಆ. 26 - ಆನ್‌ಲೈನ್ ಪೋರ್ಟಲ್ ಮೂಲಕ ಸಾರ್ವಜನಿಕರು ಸಲ್ಲಿಸುವ ದೂರುಗಳನ್ನು ಇತ್ಯರ್ಥ ಪಡಿಸುವ ಅವಧಿಯನ್ನು ಕೇಂದ್ರ ಸರ್ಕಾರ 21 ದಿನಗಳಿಗೆ ಇಳಿಕೆ ಮಾಡಿದೆ. ಈ ಹಿಂದೆ ದೂರುಗಳನ್ನು ಇತ್ಯರ್ಥಗೊಳಿಸುವ ಅವಧಿ 30 ದಿನಗಳಾಗಿತ್ತು. ಹೆಚ್ಚಿನ ಸಂಖ್ಯೆಯ ದೂರುಗಳು ಬರುವ ಸಚಿವಾಲಯಗಳು ಹಾಗೂ ಇಲಾಖೆಗಳು, ಕ್ರಮ ತೆಗೆದುಕೊಳ್ಳುವ ಸಲುವಾಗಿ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸಬೇಕು ಎಂದು ಕೇಂದ್ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.


**ಭೂವರಾಹ ಸಂಜೀವಿನಿ ಅಸ್ಪತ್ರೆ**

*ಕೆಟಿಜೆ ನಗರ 18ನೇ ಅಡ್ಡರಸ್ತೆ, ಸ್ಟೇಡಿಯಂ ಎದುರು.*

**ನರ್ಸಿಂಗ್ ಹುದ್ದೆಗೆ**

ಅರ್ಹತೆ: GNM /ANM/ B.Sc Nursing

(ಅನುಭವಿ ನರ್ಸಿಂಗ್ ಸಿಬ್ಬಂದಿಗಳಿಗೆ ಮಾತ್ರ)

Male / female / ವಸತಿ ವ್ಯವಸ್ಥೆ ಇದೆ.

Immidiete joining, Attractive salary.

ಸಂಪರ್ಕಿಸಿ : 9986520973, Landline : 08192 -230888


# ಮಳೆ ಹಾನಿಗೆ ತ್ವರಿತ ಪರಿಹಾರ, ಕಾಲಮಿತಿಯಲ್ಲಿ ಸಕಾಲ

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಸೂಚನೆ

ದಾವಣಗೆರೆ, ಆ. 26 - ಮಳೆ ಹಾನಿಗೆ ತ್ವರಿತವಾಗಿ ಪರಿಹಾರ ನೀಡಬೇಕು, ಶಾಲೆ - ಅಂಗನವಾಡಿ ಕಟ್ಟಡಗಳನ್ನು ಭದ್ರಪಡಿಸಲು ಕ್ರಮ ತೆಗೆದುಕೊಳ್ಳಬೇಕು ಹಾಗೂ ಕಾಲಮಿತಿಯಲ್ಲಿ ಸಕಾಲ ಅರ್ಜಿಗಳನ್ನು ಇತ್ಯರ್ಥಪಡಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಸೂಚನೆ ನೀಡಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆಯಲಾಗಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಶಾಸಕರು ಹಾಗೂ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಲ್ಲಿ ಕೆಲವು ವಿಳಂಬವಾಗಿವೆ. ಇವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸಕಾಲದಲ್ಲಿ ಸಲ್ಲಿಸಲಾದ 768 ಅರ್ಜಿಗಳು ಬಾಕಿ ಇರುವ ಬಗ್ಗೆ ಪ್ರಸ್ತಾಪಿಸಿದ ಅವರು, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲೇ ಅತಿ ಹೆಚ್ಚು ಅರ್ಜಿಗಳು ಬಾಕಿ ಇವೆ. ಎಲ್ಲ ಅರ್ಜಿಗಳನ್ನು ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಬೇಕು ಎಂದು ತಿಳಿಸಿದರು.



ಪ್ರಸಕ್ತ ಮುಂಗಾರಿನಲ್ಲಿ 65 ಮನೆಗಳಿಗೆ ಪೂರ್ಣ ಹಾನಿಯಾಗಿದೆ ಹಾಗೂ 80 ಮನೆಗಳಿಗೆ ಭಾಗಶಃ ಹಾನಿಯಾಗಿದೆ. 78 ಕಿ.ಮೀ. ಉದ್ದದ ಗ್ರಾಮೀಣ ರಸ್ತೆ ಹಾಗೂ 4 ಸೇತುವೆಗಳಿಗೆ ಹಾನಿಯಾಗಿದೆ. ಅಲ್ಲದೇ 89 ಶಾಲಾ ಕಟ್ಟಡಗಳು ಹಾಗೂ 38 ಅಂಗನವಾಡಿ ಕಟ್ಟಡಗಳಿಗೆ ಹಾನಿಯಾಗಿದೆ. 287 ವಿದ್ಯುತ್ ಕಂಬಗಳು ಹಾಗೂ ಎರಡು ಟ್ರಾನ್ಸ್ ಫಾರ್ಮರ್‌ಗಳಿಗೆ ಹಾನಿಯಾಗಿದೆ. 425 ಹೆಕ್ಟೇರ್ ಕೃಷಿ ಹಾಗೂ ಏಳು ಹೆಕ್ಟೇರ್ ತೋಟಗಾರಿಕೆ ಪ್ರದೇಶಕ್ಕೆ ಹಾನಿಯಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಬೆಳೆ ಹಾನಿಗೆ ತ್ವರಿತವಾಗಿ ಪರಿಹಾರ ನೀಡಬೇಕು. ಹಲವಾರು ಇಲಾಖೆಗಳಿಂದ ಲಭ್ಯವಿರುವ ಅನುದಾನ ಬಳಸಿಕೊಂಡು ಶಾಲೆ ಹಾಗೂ ಅಂಗನವಾಡಿ ಕಟ್ಟಡಗಳನ್ನು ದುರಸ್ತಿ ಪಡಿಸಬೇಕು. ಅಂಗನವಾಡಿಗಳಿಗೆ ನೀರು - ಶೌಚಾಲಯ ಇತ್ಯಾದಿ ಮೂಲಭೂತ ಸೌಲಭ್ಯ ಇರುವಂತೆ ನೋಡಿಕೊಳ್ಳಬೇಕು. ಅಂಗನವಾಡಿ ಕಟ್ಟಡಗಳು ಸುಭದ್ರವಾಗಿರುವ ಬಗ್ಗೆ ಪ್ರಮಾಣ ಪತ್ರ ಪಡೆಯಬೇಕು ಎಂದು ಉಸ್ತುವಾರಿ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಸೂಚನೆ ನೀಡಿದರು.

ತಾವು ಭೇಟಿ ನೀಡಿದ ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಮಕ್ಕಳಿಗೆ ಇಂಗ್ಲಿಷ್ ಪಠ್ಯ ಪೂರೈಕೆಯಾಗಿರಲಿಲ್ಲ. ಮಕ್ಕಳು ಕನ್ನಡದ ಪುಸ್ತಕದಲ್ಲೇ ಪಾಠ ಕಲಿಯುತ್ತಿದ್ದರು ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಡಿಡಿಪಿಐ ಕೊಟ್ರೇಶ್, 17 ಶಾಲೆಗಳಿಗೆ ಇಂಗ್ಲಿಷ್ ಪಠ್ಯ ಪೂರೈಕೆಯಾಗಿಲ್ಲ. ಜೆರಾಕ್ಸ್ ಪ್ರತಿಗಳ ಮೂಲಕ ಪಾಠ ಕಲಿಸಲಾಗುತ್ತಿದೆ ಎಂದು ಹೇಳಿದರು. ಸಾಕಷ್ಟು ಶಾಲೆಗಳಲ್ಲಿ ಬೆಂಚ್‌ಗಳ ಕೊರತೆ ಇರುವುದು ಕಂಡು ಬಂದಿದೆ. ಈ ಬಗ್ಗೆ ಕ್ರಮ ತೆಗೆದುಕೊಂಡು ಬೆಂಚ್‌ಗಳನ್ನು ಪೂರೈಸಬೇಕು. ಎಸ್.ಎಸ್.ಎಲ್. (2ನೇ ಪುಟಕ್ಕೆ)

## ಆಧಾರ್ ಜೋಡಣೆಯಲ್ಲಿ ಜಿಲ್ಲೆ ರಾಜ್ಯಕ್ಕೇ ಪ್ರಥಮ

**ಆರ್.ಟಿ.ಸಿ. ಹಾಗೂ ಆಧಾರ್ ಜೋಡಣೆ ವಿಷಯದಲ್ಲಿ ದಾವಣಗೆರೆ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಶೇ.91.95ರಷ್ಟು ಆರ್.ಟಿ.ಸಿ.ಗಳು ಆಧಾರ್‌ಗೆ ಜೋಡಣೆಯಾಗಿವೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು. ಜಿಲ್ಲೆಯಲ್ಲಿ 8,65,233 ಆರ್.ಟಿ.ಸಿ.ಗಳಿದ್ದು, ಈ ಪೈಕಿ 7,79,583 ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಹೇಳಿದರು.**

## ನೆಲಕ್ಕುರುಳಿತು ಮೋದಿ ಅನಾವರಣಗೊಳಿಸಿದ್ದ ಶಿವಾಜಿ ಪ್ರತಿಮೆ

ಮುಂಬೈ, ಆ. 26 - ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ಸಿಂಧೂದುರ್ಗ ಜಿಲ್ಲೆಯಲ್ಲಿ ಅನಾವರಣಗೊಳಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಉರುಳಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

35 ಅಡಿ ಎತ್ತರದ ಶಿವಾಜಿ ಪ್ರತಿಮೆಯನ್ನು ಮಲ್ವನ್ ಎಂಬಲ್ಲಿನ ರಾಜಕೋಟ್ ಕೋಟೆಯಲ್ಲಿ ನಿರ್ಮಿಸಲಾಗಿತ್ತು. ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಈ ಪ್ರತಿಮೆ ಕುಸಿದಿದೆ.

ಈ ಘಟನೆಗೆ ಕಾರಣ ಏನು ಎಂಬುದು ಸ್ಪಷ್ಟವಾಗಿಲ್ಲ. ಆದರೆ ಕಳೆದ ಮೂರು ದಿನಗಳಿಂದ ಈ ಪ್ರದೇಶದಲ್ಲಿ ಭಾರೀ ಮಳೆ ಹಾಗೂ ಬಿರುಸಾದ ಗಾಳಿ ಬೀಸುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಧಾನಿ ಮೋದಿ ಅವರು ಕಳೆದ ವರ್ಷ ಡಿಸೆಂಬರ್ 4ರ ನೌಕಾ ದಿನದಂದು ಪ್ರತಿಮೆಯನ್ನು ಅನಾವರಣಗೊಳಿಸಿದ್ದರು.

ಈ ಬಗ್ಗೆ ಹೇಳಿಕೆ ನೀಡಿರುವ ಎನ್‌ಸಿಪಿ (ಎಸ್‌ಪಿ) ರಾಜ್ಯಾಧ್ಯಕ್ಷ ಜಯಂತ್ ಪಾಟೀಲ್, ಪ್ರತಿಮೆ ಕುಸಿದಿರುವುದಕ್ಕೆ (4ನೇ ಪುಟಕ್ಕೆ)


**ಕೈಲಾಸ ಶಿವಗಣಾರಾಧನೆ**



ಜನನ: 20.01.1942 **ಎಂ. ಬಸವರಾಜ್** ಮರಣ: 24.08.2024

ಮಲ್ಲೇರ ಎಂ.ಶಿವಪ್ಪ, ಬಸವಾಪಟ್ಟಣ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಮಾಡುವ ವಿಜ್ಞಾಪನೆಗಳು.

ನಮ್ಮ ಪೂಜ್ಯ ಅಣ್ಣನವರಾದ ಎಂ. ಬಸವರಾಜ್ (ನಿವೃತ್ತ ಕೆ.ಇ.ಬಿ. ಸೀನಿಯರ್ ಅಸಿಸ್ಟೆಂಟ್) ಇವರು ದಿನಾಂಕ 24.08.2024 ನೇ ಶನಿವಾರ ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 28.08.2024 ನೇ ಬುಧವಾರ ಮುಂಜಾನೆ 10.30ಕ್ಕೆ ಬಸವಾಪಟ್ಟಣದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದೇವೆ. ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ದಿ|| ಎಂ. ಚನ್ನಪ್ಪನವರ ಪತ್ನಿ ಶ್ರೀಮತಿ ಗಿರಿಜಮ್ಮ ಮತ್ತು ಮಕ್ಕಳು ಮತ್ತು ಮೊಮ್ಮಕ್ಕಳು, ಮೃತರ ಧರ್ಮಪತ್ನಿ ಶ್ರೀಮತಿ ಶಾರದಮ್ಮ ಮತ್ತು ಮಕ್ಕಳು, ಶ್ರೀ ಎಂ. ಶಿವಪ್ಪ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಮಲ್ಲೇರ ವಂಶಸ್ಥರು ಹಾಗೂ ಬಂಧು ಮಿತ್ರರು, ಬಸವಾಪಟ್ಟಣ

# ಧರ್ಮದ ರಕ್ಷಣೆಗಾಗಿ ಧರೆಗಿಳಿದವನೇ ಶ್ರೀ ಕೃಷ್ಣ

## ಶಾಸಕ ಬಿ.ದೇವೇಂದ್ರಪ್ಪ



ಜಗಳೂರು, ಆ. 26-ಸಮಾಜದಲ್ಲಿ ಅಧರ್ಮ ತಾಂಡವವಾಡುತ್ತಿರುವಾಗ ಧರ್ಮರಕ್ಷಣೆಗೆ ಧರೆಗಿಳಿದು ಬರುವವನೇ ಅವತಾರ ಪುರುಷ ಶ್ರೀಕೃಷ್ಣ ಎಂದು ಶಾಸಕ ಬಿ.ದೇವೇಂದ್ರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಜಯಂತಿ ಅಂಗವಾಗಿ ಶ್ರೀಕೃಷ್ಣನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಮಹಾಭಾರತದ ಶ್ರೀ ಕೃಷ್ಣನು ಕೇವಲ ಯಾದವ ಸಮಾಜಕ್ಕೆ ಸೀಮಿತವಾಗದೆ ಎಲ್ಲಾ ವರ್ಗದವರು ಮಹಾಭಾರತ ಗ್ರಂಥವನ್ನು ಅಧ್ಯಯನ ನಡೆಸಬೇಕಿದೆ.ಇದರಿಂದ ಗೀತಾಸಾರ, ಶ್ರೀಕೃಷ್ಣನ ಸಂದೇಶಗಳನ್ನು ಯುವ ಪೀಳಿಗೆಗೆ ಪಸರಿಸಬೇಕಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತ ನಡೆಸುತ್ತಿದ್ದು ಹಿಂದುಳಿದ, ಶೋಷಿತ ಸಮುದಾಯಗಳು ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಮುಖ್ಯವಾಹಿನಿಗೆ ಬರಬೇಕಿದೆ ಎಂದು ಕಿವಿಮಾತು ಹೇಳಿದರು.

**ಜಯಂತಿಗೆ ಅಧಿಕಾರಿಗಳು ಗೈರು ಶಾಸಕ ಗರಂ:** ಸರಳ ಶ್ರೀಕೃಷ್ಣ ಜನ್ಮಾಷ್ಟಮಿ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಗೈರು ಕಂಡು ಗರಂ ಆದ ಶಾಸಕರು ತಹಶೀಲ್ದಾರ್‌ರನ್ನೊಳಗೊಂಡಂತೆ,ವಿವಿಧ ಇಲಾಖೆಗಳ ಅನುಷ್ಠಾನ ಅಧಿಕಾರಿಗಳು ಗೈರಾಗಿರುವುದು ಮಹಾನೀಯರಿಗೆ, ದಾರ್ಶನಿಕರಿಗೆ, ತೋರುವ ಅಗೌರವದ ಪ್ರತಿಬಿಂಬವಾಗಿದೆ. ಗೈರಾದ ಪ್ರತಿಯೊಬ್ಬ ಇಲಾಖೆ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿಗೋಳಿಸಲು' ಗ್ರೇಡ್ -2 ತಹಶೀಲ್ದಾರ್ ಮಂಜಾನಂದ ಅವರಿಗೆ ಸೂಚಿಸಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿದ ಯಾದವ ಸಮಾಜದವರು ಸಹೋದರ ಸಮುದಾಯಗಳ ಸಹಯೋಗದಲ್ಲಿ ಅದ್ದೂರಿಯಾಗಿ ಶ್ರೀ ಕೃಷ್ಣ ಜಯಂತ್ಯೋತ್ಸವ ಆಚರಿಸಬೇಕಿದೆ.ಹೆಚ್ಚು ಜನ ಭಾಗವಹಿಸಬೇಕು. ಕಳೆದ ವರ್ಷ ಯಾದವ ಸಮಾಜದ ಶ್ರೀಗಳ ಸಾನ್ನಿಧ್ಯದಲ್ಲಿ ಕೃಷ್ಣ ಜಯಂತಿ ಆಚರಿಸಲಾಗಿತ್ತು. ಪ್ರಸಕ್ತವಾಗಿ ಉತ್ತಮ ಮಳೆ-ಬೆಳೆಯಾಗಿದ್ದು, ಈ ಬಾರಿಯೂ ಸಂಭ್ರಮದ ಆಚರಣೆಗೆ ಮುಂದಾಗೋಣ ಎಂದು ಕರೆ ನೀಡಿದರು.

ಎಸ್ ಟಿ ಘಟಕದ ರಾಜ್ಯ ಮುಖಂಡ ಕೆ.ಪಿ. ಪಾಲಯ್ಯ ಮಾತನಾಡಿ, ದಾರ್ಶನಿಕರ ಜಯಂತಿಗಳು ಕೇವಲ ಸರ್ಕಾರಿ ಕಾರ್ಯಕ್ರಮಕ್ಕೆ ಸೀಮಿತವಾಗದೆ ಸಾಂಸ್ಕೃತಿಕ ಕಾರ್ಯಕ್ರಮಗಳಾಗಬೇಕಿದೆ. ಶ್ರೀಕೃಷ್ಣನ ಜೀವನ ಚರಿತ್ರೆ, ಅವತಾರಗಳು ಯುವಪೀಳಿಗೆಗೆ ತಲುಪಬೇಕಿದೆ. ಇಂದಿನ ಯುವಪೀಳಿಗೆ ಉನ್ನತ ಶಿಕ್ಷಣ, ಅಭ್ಯಾಸದಿಂದ ವಿಮುಖಗೊಂಡು ಮೊಬೈಲ್ ಗೀಳಿನಲ್ಲಿ ತಲ್ಲೀನರಾಗಿ ದ್ದಾರೆಂದು ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗ್ರೇಡ್ -2 ತಹಶೀಲ್ದಾರ್ ಮಂಜಾನಂದ, ಪ.ಪಂ ಸದಸ್ಯರಾದ ರಮೇಶ್ ರೆಡ್ಡಿ, ಶಕೀಲ್ ಅಹಮ್ಮದ್, ಯಾದವ ಸಮಾಜದ ತಾಲೂಕು ಅಧ್ಯಕ್ಷ ಕೃಷ್ಣಪ್ಪ, ಮುಖಂಡರಾದ ಜೀವಣ್ಣ, ತಿಪ್ಪೇಸ್ವಾಮಿಗೌಡ, ಬಾಲರಾಜ್, ರಂಗಸ್ವಾಮಿ, ಕಾಟಪ್ಪ, ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ,ಸಿ.ತಿಪ್ಪೇಸ್ವಾಮಿ, ಕಾಟಲಿಂಗಪ್ಪ,ಕುಮಾರ್,ಕುಬೇಂದ್ರಪ್ಪ,ಬಿ. ಲೋಕೇಶ್, ಸೇರಿದಂತೆ ಇದ್ದರು.

# ಚರ್ಚಾ ಸ್ಪರ್ಧೆ : ಹಾಲಮ್ಮ ಕಾಲೇಜಿನ ಭೂಮಿಕಾ ಪ್ರಥಮ



ದಾವಣಗೆರೆ, ಆ. 22 - ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ನಡೆಸಿದ ಚರ್ಚಾ ಸ್ಪರ್ಧೆಯಲ್ಲಿ ಜಿ.ಎಂ. ಹಾಲಮ್ಮ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಭೂಮಿಕ ಪ್ರಥಮ ಸ್ಥಾನ ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ವತಿಯಿಂದ ಆಯೋಜಿಸಿದ್ದ 'ಸಹಕಾರ ವಲಯದ ಪ್ರಾಥಮಿಕ ಸಂಘಗಳ ಬಲವರ್ಧನೆಯಿಂದ ಮಾತ್ರವೇ ಸಹಕಾರ ಚಳುವಳಿ ಸದೃಢಗೊಳ್ಳಬಲ್ಲದು ಎಂಬ ವಿಷಯದ ಕುರಿತು ವಿರೋಧವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಓಂಕಾರಪ್ಪ ಸಹ ಆಡಳಿತಾಧಿಕಾರಿ ಜಿ.ಜೆ. ಶಿವಕುಮಾರ, ವಿದ್ಯಾರ್ಥಿನಿಗೆ ಅಭಿನಂದನೆ ತಿಳಿಸಿದ್ದಾರೆ.

# ಯೋಗ ಸ್ಪರ್ಧೆಗೆ ಚೈತನ್ಯ ಗುರುಕುಲ ಶಾಲೆ ವಿದ್ಯಾರ್ಥಿಗಳು



ಚನ್ನಗಿರಿ, ಆ. 23- ಸಂತೇಬೆನ್ನೂರಿನ ಚೈತನ್ಯ ಗುರುಕುಲ ಶಾಲೆಯ ವಿದ್ಯಾರ್ಥಿಗಳು ವಲಯಮಟ್ಟದ ಕ್ರೀಡಾ ಕೂಟದ 'ಯೋಗ' ಸ್ಪರ್ಧೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗಗಳಲ್ಲಿ ಜಯಗಳಿಸಿ, ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್, ಶಿವಸ್ವಾಮಿ, ಶಿಕ್ಷಕರು, ಸಿಬ್ಬಂದಿಯವರು ಉಪಸ್ಥಿತರಿದ್ದರು.

# ನಗರದ ವೈಆರ್‌ಪಿ ಕರಾಟೆ ಪಟುಗಳಿಗೆ 6 ಚಿನ್ನದ ಪದಕ



ದಾವಣಗೆರೆ, ಆ. 27 - ಮಳವಳ್ಳಿಯಲ್ಲಿ ಈಚೆಗೆ ನಡೆದ 'ಮಳವಳ್ಳಿ ರಾಷ್ಟ್ರ ಮಟ್ಟದ ಓಪನ್ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ನಗರದ ವೈಆರ್‌ಪಿ ಕರಾಟೆ ಆ್ಯಂಡ್ ಸೆಲ್ಫ್ ಡಿಫೆನ್ಸ್ ಫೆಡರೇಷನ್‌ನ ಕ್ರೀಡಾಪಟುಗಳು ಕತಾ ಮತ್ತು ಕುಮಿತೆ ವಿಭಾಗದಲ್ಲಿ ಭಾಗವಹಿಸಿ 6 ಚಿನ್ನ, 4 ಬೆಳ್ಳಿ, 6 ಕಂಚಿನ ಪದಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

# ದೇಹ, ಮನಸ್ಸಿನ ಸ್ವಾಸ್ಥ್ಯಕ್ಕೆ ಕ್ರೀಡೆಯೇ ಔಷಧ : ಸಿದ್ದೇಶ್ವರ



ದಾವಣಗೆರೆ, ಆ. 26- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ದಾವಣಗೆರೆ ವಿಭಾಗದ ವತಿಯಿಂದ ಶುಕ್ರವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ವಿಭಾಗ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ ನಡೆಯಿತು. ಕ್ರೀಡೆಯು ದೇಹ ಹಾಗೂ ಮನಸ್ಸಿಗೆ ಆರೋಗ್ಯಕರವಾದ ಔಷಧವೆಂದು ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಎನ್. ಹೆಬ್ಬಾಳ ಉದ್ಘಾಟಿಸಿ ಮಾತನಾಡಿದರು. ಈ ವೇಳೆ ದಾವಣಗೆರೆ ವಿಭಾಗದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



# ಹಾಲಿವಾಣದಲ್ಲಿ ಸಂಭ್ರಮದ ಕೃಷ್ಣ ಜನ್ಮಾಷ್ಟಮಿ

ಮಲೇಬೆನ್ನೂರು, ಆ.26- ಹಾಲಿವಾಣ ಗ್ರಾಮದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಗ್ರಾಮಸ್ಥರು ಸಂಭ್ರಮದಿಂದ ಆಚರಿಸಿದರು. ಜನ್ಮಾಷ್ಟಮಿ ಅಂಗವಾಗಿ ಗ್ರಾಮದ ಎಲ್ಲಾ ಅಂಗನವಾಡಿ ಮಕ್ಕಳನ್ನು ಕೃಷ್ಣ ಮತ್ತು ರಾಧೆ ವೇಷಧಾರಿಗಳನ್ನಾಗಿ ಸಿಂಗಾರಿ ಮಾಡಿ, ಗ್ರಾಮದಲ್ಲಿ ಮೆರವಣಿಗೆ ಮಾಡಿ ಎಲ್ಲರ ಗಮನ ಸೆಳೆದರು.

# ಪಾಕ್ : ಬಲೂಚ್ ಉಗ್ರರ ದಾಳಿಯಲ್ಲಿ 37 ಸಾವು

ಕರಾಚಿ, ಆ. 26 - ಪಾಕಿಸ್ತಾನದ ಪಕ್ಷುಬ್ಧಿತ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಭಾರೀ ಶಸ್ತ್ರ ಸಜ್ಜಿತ ಬಲೂಚ್ ಬಂದೂಕುಧಾರಿಗಳು ಪ್ರತ್ಯೇಕ ದಾಳಿಗಳಲ್ಲಿ ಕನಿಷ್ಠ 37 ಜನರನ್ನು ಹತ್ಯೆಗೈದಿದ್ದಾರೆ. ಭಾನುವಾರ ಮಧ್ಯರಾತ್ರಿ ಉಗ್ರರು ನಾಲ್ಕು ದಾಳಿಗಳನ್ನು ನಡೆಸಿ 37 ಜನರನ್ನು ಕೊಂದು ಹಾಕಿದ್ದಾರೆ. ನಂತರ ನಡೆಸಲಾದ ಕಾರ್ಯಾಚರಣೆಗಳಲ್ಲಿ 21 ಉಗ್ರರು ಹತರಾಗಿದ್ದಾರೆ ಎಂದು ಪಾಕಿಸ್ತಾನದ ಅಧಿಕಾರಿಗಳು ತಿಳಿಸಿದ್ದಾರೆ.

# ಮಳೆಗೆ ಕುಸಿದ ಸುಡಾನ್ ಅಣೆಕಟ್ಟೆ

ಕೈರೊ, ಆ. 26 - ಬಾರಿ ಮಳೆ ಕಾರಣದಿಂದಾಗಿ ಸುಡಾನ್‌ನಲ್ಲಿ ಅಣೆಕಟ್ಟೆಯೆಂದು ಕುಸಿದು ಕನಿಷ್ಠ 60 ಜನ ಸಾವನ್ನಪ್ಪಿದ್ದಾರೆ.

ಶೋಧ ಹಾಗೂ ನೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಅರ್ಬತ್ ಅಣೆಕಟ್ಟೆ ಸುಮಾರು 25 ದಶಲಕ್ಷ ಕ್ಯುಬಿಕ್ ಮೀಟರ್ ಸಾಮರ್ಥ್ಯದ್ದಾಗಿತ್ತು. ಇದು ಬಂದರು ನಗರವಾದ ಪೋರ್ಟ್ ಸುಡಾನ್‌ಗೆ ಕುಡಿಯುವ ನೀರು ಪೂರೈಸುವ ಪ್ರಮುಖ ತಾಣವಾಗಿತ್ತು. ಈ ನಗರ ಸೈನಿಕ ಸರ್ಕಾರದ ನೆಲೆಯೂ ಆಗಿದೆ. ಕಳೆದ 16 ತಿಂಗಳಿನಿಂದ ಸುಡಾನ್ ಅಂತರ್ ಯುದ್ಧ ಎದುರಿಸುತ್ತಿದೆ. ಈಗ ಧಾರಾಕಾರ ಮಳೆ ಸುರಿಯುತ್ತಿದ್ದು ಪ್ರವಾಹ ಪರಿಸ್ಥಿತಿಯು ಉಂಟಾಗಿದೆ. ಇದರಿಂದಾಗಿ ಹಲವರು ಸಾವನ್ನಪ್ಪಿದ್ದಾರೆ ಹಾಗೂ ಸಾವಿರಾರು ಜನ ಸ್ಥಳಾಂತರ ಗೊಂಡಿದ್ದಾರೆ.

ರೆಡ್ ಸೀ ರಾಜ್ಯದಲ್ಲಿ ಉಂಟಾಗಿರುವ ಅಣೆಕಟ್ಟೆ ಕುಸಿತ ಅತ್ಯಂತ ಭೀಕರ ಅಪಘಾತಗಳಲ್ಲಿ ಒಂದಾಗಿದೆ. ಇದರಿಂದಾಗಿ ಅಣೆಕಟ್ಟೆ ತಳ ಭಾಗದಲ್ಲಿದ್ದ ಹಲವು ಹಳ್ಳಿಗಳು ಕೊಚ್ಚಿಹೋಗಿವೆ. ಧಾರಾಕಾರ ಮಳೆಯಿಂದಾಗಿ ಫೈಬರ್ ಆಪ್ಟಿಕ್ ಕೇಬಲ್ ಪ್ರಮುಖ ಸಂಪರ್ಕ ಸಹ ತುಂಡಾಗಿದೆ. ದೇಶದ ಹಲವು ಭಾಗಗಳಲ್ಲಿ ಎರಡು ದಿನಗಳಿಂದ ಸಂಪರ್ಕ ಕಡಿತವಾಗಿದೆ.

# ಹರಿಹರದಲ್ಲಿ ಅಪರಿಚಿತ ಶವ ಪತ್ತೆ

ಹರಿಹರ, ಆ. 26 - ನಗರದ ಕಸಬಾ ಊರಮ್ಮದೇವಸ್ಥಾನದ ಹಿಂಭಾಗದಲ್ಲಿ ನಗರ ಸಭೆಗೆ ಸೇರಿದ ಕಾಂಪ್ಲೆಕ್ಸ್ ಮಳಿಗೆ 18 ರಲ್ಲಿ ಸೋನಿ ಎಲೆಕ್ಟ್ರಾನಿಕ್ಸ್ ರಿಪೇರಿ ಅಂಗಡಿ ಮುಂದೆ ಸಮಾರು 50 ರಿಂದ 60 ವರ್ಷದ ಮೃತ ದೇಹ ಪತ್ತೆಯಾಗಿರುತ್ತದೆ. ಮೃತನ ಬಗ್ಗೆ ಮಾಹಿತಿ ಇರುವುದಿಲ್ಲ.

ಮೃತನ ಬಲ ಗೈ ಮೇಲೆ ಪಲ್ಲವಿ ಅಂತ ಹಚ್ಚೆ ಗುರುತು ಇರುತ್ತದೆ. ಇವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಹರಿಹರ ಟೌನ್ ಪಿಎಸ್, ಪೊಲೀಸ್ ನಿಯಂತ್ರಣ ಕೋಣೆಗೆ ಅಥವಾ ದೂ.ಸಂ. 08192-272016, 253100, 253400, 9480803257 ಗೆ ಕರೆ ಮಾಡಿ ತಿಳಿಸಲು ಹರಿಹರ ಪೊಲೀಸ್ ಠಾಣೆ ನಿರೀಕ್ಷಕರಾದ ಎಸ್.ದೇವಾನಂದ ತಿಳಿಸಿದ್ದಾರೆ.


# ನಗರದಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

ದಾವಣಗೆರೆ, ಆ. 26 - ನಗರದ ಶಾಮನೂರು ಬ್ರಿಡ್ಜ್ ಕೆಳಗಡೆ ಬಿಕ್ಷೆ ಬೇಡುತಿದ್ದ ಸಮಾರು 40 ರಿಂದ 45 ವರ್ಷದ ಮಹಿಳೆಯ ಮೃತ ದೇಹ ಪತ್ತೆಯಾಗಿದೆ. ಕಪ್ಪು ಮೈ ಬಣ್ಣ, ತೆಳ್ಳನೆಯ ಮೈಕಟ್ಟು, ಹಸಿರು ಬಣ್ಣದ ಬ್ಲೌಸ್, ಆರೆಂಜ್ ಕಲರ್ ಸೀರೆ ಧರಿಸಿರುತ್ತಾಳೆ. ಮುಖದಲ್ಲಿ ಕಪ್ಪು ಗುರುತು ಇರುತ್ತದೆ. ವಾರಸುದಾರರ ಮಾಹಿತಿ ತಿಳಿದು ಬಂದಲ್ಲಿ ದೂರವಾಣಿ 08192-262688, 9480803251 ಗೆ ಕರೆ ಮಾಡಿ ತಿಳಿಸಲು ವಿದ್ಯಾನಗರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

# ಹದಡಿ ಬಳಿ ಅಪರಿಚಿತನ ಶವ ಪತ್ತೆ

ದಾವಣಗೆರೆ, ಆ.26 - ನಗರದ ಹದಡಿ ಬ್ರಿಡ್ಜ್ ಇರುವ ಚಾನಲ್ ಕಟ್ಟೆಯ ಮೇಲೆ ಸಮಾರು 35 ರಿಂದ 40 ವರ್ಷದ ಮೃತ ದೇಹ ಪತ್ತೆಯಾಗಿರುತ್ತದೆ. ಕಪ್ಪು ಪ್ಯಾಂಟ್ ಮತ್ತು ಬಿಳಿ, ನೀಲಿ ಬಣ್ಣ ಪಟ್ಟಿವುಳ್ಳ ಟೀ ಶರ್ಟ್ ಧರಿಸಿರುತ್ತಾರೆ. ಇವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ದೂ.ಸಂ. 08192-262688, 9480803251 ಗೆ ಕರೆ ಮಾಡಿ ತಿಳಿಸಲು ವಿದ್ಯಾನಗರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

# ಸಾಲಬಾಧೆ: ವಿಷ ಸೇವಿಸಿ ರೈತ ಆತ್ಮಹತ್ಯೆ



ಹೊನ್ನಾಳಿ, ಆ. 26- ಸಾಲಬಾಧೆ ತಾಳಲಾರದೆ ವಿಷ ಸೇವಿಸಿ ರೈತನೋರ್ವ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ ಘಟನೆ ಹೊನ್ನಾಳಿ ತಾಲೂಕಿನ ಬಳ್ಳೇಶ್ವರ ಗ್ರಾಮದಲ್ಲಿ ನಡೆದಿದೆ. 64 ವರ್ಷದ ರೈತ ಧರಿಯಪ್ಪ ಎಂಬ ವ್ಯಕ್ತಿಯು ಆ. 18 ರಂದು ವಿಷ ಕುಡಿದಿದ್ದು, ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ನಂತರ ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ ರೈತ ಸಾವನ್ನಪ್ಪಿದ್ದಾರೆ. ಮೃತ ರೈತ ತನ್ನ 5 ಎಕರೆ ಜಮೀನಿನಲ್ಲಿ ಭತ್ತ, ಮೆಕ್ಕೆಜೋಳ ಬೆಳೆದಿದ್ದರು. ಎಸ್. ಬಿ.ಐ. ನಲ್ಲಿ 2,80,000, ಐ.ಡಿ.ಎಫ್.ಸಿ. ಬ್ಯಾಂಕ್ ಲ್ಲಿ 5 ಲಕ್ಷ ಸಾಲ ಮಾಡಿದ್ದು, ಖಾಸಗಿಯವರಿಂದ 2ಲಕ್ಷ ಸಾಲ ಸೇರಿದಂತೆ ಒಟ್ಟು 10 ಲಕ್ಷ ರೂ.ಸಾಲ ಮಾಡಿದ್ದರು ಎನ್ನಲಾಗಿದೆ. ಹೊನ್ನಾಳಿ ಪೊಲೀಸ್ ಇನ್ಸಪೆಕ್ಟರ್ ಎಚ್.ಸುನಿಲ್ ಕುಮಾರ್ ಬಳ್ಳೇಶ್ವರ ಗ್ರಾಮದ ಶ್ರೀಪಾಲ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಮಳೆ ಹಾನಿಗೆ ತ್ವರಿತ ಪರಿಹಾರ

**(1ನೇ ಪುಟದಿಂದ)** ಸಿ. ಫಲಿತಾಂಶ ಸುಧಾರಣೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

ನ್ಯಾಮತಿಯ ಬಸವನಹಳ್ಳಿಯಲ್ಲಿ ತುಂಗಾ ಮೇಲ್ದಂಡೆಯ ಎಡ ಕಾಲುವೆ ಒಡೆದು ಹೊಲಗಳಿಗೆ ನೀರು ನುಗ್ಗಿದೆ. ಕಾಲುವೆ ದುರಸ್ತಿಪಡಿಸಲು ಹಾಗೂ ಸಮೀಕ್ಷೆ ನಡೆಸಿ ಬೆಳೆ ಹಾನಿಯ ಅಂದಾಜು ವಿವರ ಪಡೆಯಲು ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಸೂರ್ಯಕಾಂತಿ ಹಾಗೂ ಹೆಸರುಕಾಳು ಖರೀದಿ ಕೇಂದ್ರವನ್ನು ಜಿಲ್ಲೆಯಲ್ಲೂ ತೆರೆಯುವಂತೆ ರೈತರು ಮನವಿ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸುರೇಶ್ ಇಟ್ನಾಳ್, ಕಲಪನಹಳ್ಳಿಯಲ್ಲಿ ಮೆಗಾ ಡೈರಿ ಸ್ಥಾಪಿಸಲು ಸರ್ಕಾರದಿಂದ 150 ಕೋಟಿ ರೂ. ನೆರವಿನ ಅಗತ್ಯವಿದೆ. ಐದು ಪ್ರಮುಖ ಬಹುಗ್ರಾಮ ಯೋಜನೆಗಳಿಗೆ 498 ಕೋಟಿ ರೂ.ಗಳ ಅಗತ್ಯವಿದೆ ಎಂದು ಹೇಳಿದರು.

## ರಂಗಮಂದಿರದ 'ಬಾರಾ ಕಮಾನ್' ಮುಕ್ತಿಗೆ ಸ್ಮಾರ್ಟ್ ಸಹಕಾರ

ಕೆ.ಆರ್.ಡಿ.ಎಲ್. ಮೂಲಕ ನಿರ್ಮಿಸಲಾಗುತ್ತಿರುವ ಜಿಲ್ಲಾ ರಂಗ ಮಂದಿರ ಅರ್ಧಕ್ಕೆ ನಿಂತಿದೆ. ಅರೆಬರೆ ಕಾಮಗಾರಿಯಿಂದ 'ಬಾರಾ ಕಮಾನ್' ರೀತಿ ಆಗಿರುವ ಈ ರಂಗಮಂದಿರ ಪೂರ್ಣಗೊಳಿಸಲು ಸ್ಮಾರ್ಟ್ ಸಿಟಿ ವತಿಯಿಂದ 3 ಕೋಟಿ ರೂ. ಗಳನ್ನು ಪಡೆಯುವ ಉದ್ದೇಶವಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

2013 ರಲ್ಲಿ ರೂ.4.34 ಕೋಟಿ ಅನುದಾನದಲ್ಲಿ ಜಿಲ್ಲಾ ರಂಗಮಂದಿರದ ನಿರ್ಮಾಣ ಆರಂಭವಾಗಿತ್ತು. ನಂತರ ಅನುದಾನದ ಕೊರತೆಯಿಂದ ಪೂರ್ಣವಾಗಿರುವುದಿಲ್ಲ. ಈಗ ಹೆಚ್ಚುವರಿಯಾಗಿ 4 ಕೋಟಿ ರೂ.ಗಳಷ್ಟು ಅನುದಾನ ಅವಶ್ಯಕತೆ ಇದೆ. ಈ ರಂಗಮಂದಿರ ನಿರ್ಮಾಣವಾದಲ್ಲಿ ದಾವಣಗೆರೆ ಜನತೆಗೆ ಸಾಕಷ್ಟು ಅನುಕೂಲವಾಗಲಿದೆ. ಸ್ಮಾರ್ಟ್‌ಸಿಟಿ ಯೋಜನೆಯಲ್ಲಿ ಉಳಿತಾಯವಾದ ಅನುದಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ಬಳಕೆ ಮಾಡಿಕೊಂಡು ಅಪೂರ್ಣವಾಗಿರುವ ರಂಗಮಂದಿರವನ್ನು ನಿರ್ಮಾಣ ಮಾಡಬಹುದು ಎಂದು ಜಿಲ್ಲಾಧಿಕಾರಿ ಹೇಳಿದರು. ಇದಕ್ಕೆ ಉಸ್ತುವಾರಿ ಕಾರ್ಯದರ್ಶಿಯವರು ವಿವರವಾದ ಪ್ರಸ್ತಾವನೆಯನ್ನು ವರದಿಯೊಂದಿಗೆ ನೀಡಲು ತಿಳಿಸಿದರು.

## ಚಿಗಟೇರಿ ಆಸ್ಪತ್ರೆ ಕಟ್ಟಡವೇ ರೋಗಗ್ರಸ್ಥ

ಜಿಲ್ಲಾ ಚಿಗಟೇರಿ ಆಸ್ಪತ್ರೆಯ ಕಟ್ಟಡ ಶಿಥಿಲವಾಗಿದೆ. ಕಟ್ಟಡದ ಪರಿಸ್ಥಿತಿ ಶೋಚನೀಯವಾಗಿದೆ. ಕಟ್ಟಡಕ್ಕಾಗಿ 30 ಕೋಟಿ ರೂ.ಗಳ ಅಗತ್ಯವಿದೆ. ಆಸ್ಪತ್ರೆಗೆ ವೈದ್ಯರು ಹಾಗೂ ಸಿಬ್ಬಂದಿಯ ಕೊರತೆಯೂ ಇದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಕಟ್ಟಡ ದುರಸ್ತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ. ಜಿಂದಾಲ್ ಕಂಪನಿಯಿಂದ ಸಿ.ಎಸ್.ಆರ್. ನಿಧಿ ಮೂಲಕ ನೆರವು ಪಡೆಯುವ ಪ್ರಯತ್ನವನ್ನೂ ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಕೊಟ್ರೇಶ್, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಹರಿಹರದಲ್ಲಿ ಅಪರಿಚಿತನ ಶವ ಪತ್ತೆ

ಹರಿಹರ, ಆ. 26 - ಹರಿಹರ ನಗರದ ಶ್ರೀ ಅರವಿಂದ ಮೆಟಲ್ ಸ್ಟೋರ್ ಮಳಿಗೆ ಅಂಗಡಿ ಮುಂದೆ ಸಮಾರು 40 ರಿಂದ 45 ವರ್ಷದ ಮೃತ ದೇಹ ಪತ್ತೆಯಾಗಿರುತ್ತದೆ. ಮೃತನ ಬಗ್ಗೆ ಮಾಹಿತಿ ಇರುವುದಿಲ್ಲ.

ಮೃತನು ನೀಲಿ ಮತ್ತು ಬಿಳಿ ಬಣ್ಣದ ಶರ್ಟ್, ಸಿಮೆಂಟ್ ಕಲರ್ ಪ್ಯಾಂಟು ಹಾಗೂ ಕಪ್ಪು ಬಣ್ಣದ ಡ್ರಾಯರ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಹರಿಹರ ಟೌನ್ ಪಿಎಸ್, ಪೊಲೀಸ್ ನಿಯಂತ್ರಣ ಕೊಠಡಿಗೆ ಅಥವಾ 08192-272016, 9480803257 ಸಂಖ್ಯೆಗಳಿಗೆ ಕರೆ ಮಾಡಿ ತಿಳಿಸಲು ಹರಿಹರ ಪೊಲೀಸ್ ಠಾಣೆ ನಿರೀಕ್ಷಕರಾದ ಎಸ್.ದೇವಾನಂದ ತಿಳಿಸಿದ್ದಾರೆ.

# ಲೈಂಗಿಕ ಪೀಡನೆ : ಮಲಯಾಳಂ ಚಿತ್ರ ನಿರ್ಮಾಪಕ ರಣಜಿತ್ ವಿರುದ್ಧ ಪ್ರಕರಣ

ತಿರುವನಂತಪುರಂ, ಆ. 26 - ಲೈಂಗಿಕ ಪೀಡನೆ ಆರೋಪದ ಹಿನ್ನೆಲೆಯಲ್ಲಿ ಮಲಯಾಳಂ ಚಿತ್ರರಂಗದ ಹೆಸರಾಂತ ನಿರ್ಮಾಪಕ ರಣಜಿತ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಹಿರಂಗವಾದ ನಂತರ ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ವ್ಯಾಪಕ ಚರ್ಚೆ ಆರಂಭವಾಗಿದೆ. ಈ ನಡುವೆಯೇ, ಹಲವಾರು ನಟಿಯರು ತಾವು ಎದುರಿಸಿದ ಸಮಸ್ಯೆಗಳ ಕುರಿತು ಮಾತನಾಡಿದ್ದಾರೆ.

ರಣಜಿತ್ ತಮ್ಮ ಜೊತೆ ಅನುಚಿತವಾಗಿ ನಡೆದುಕೊಂಡಿದ್ದರು ಎಂದು ಬಂಗಾಳಿ ನಟಿ ಒಬ್ಬರು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಆ. 19 - ಪ್ರಸಕ್ತ ಸಾಲಿನಲ್ಲಿ ವಿಕಲಚೇತನ ವಿದ್ಯಾರ್ಥಿಗಳು ಸ್ಕಾಲರ್ ಶಿಪ್ ಪಡೆಯಲು ಪೋಸ್ಟ್ ಮೆಟ್ರಿಕ್ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ವಿಕಲಚೇತನ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾರ್ಥಿವೇತನ ಪಡೆಯುವುದಕ್ಕಾಗಿ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ವೆಬ್‌ಸೈಟ್ ವಿಳಾಸ: ssp.postmatric.karnataka.gov.inನಲ್ಲಿ ನೋಂದಣಿ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಬಹುದು ಎಂದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ನಾಲ್ಕನೇ ವರ್ಷದ ಪುಣ್ಯ ಸ್ಮರಣೆ



**ದಿ|| ಕೆ.ಆರ್. ಮಂಜುನಾಥ್, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ ನೆನಪುಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...

ಪತ್ನಿ : ಶ್ರೀಮತಿ ಸುಪ್ರಭಾ ಮಂಜುನಾಥ್, ಮಗ : ಕೆ.ಎಂ. ಗಗನ್
ತಮ್ಮ : ಶ್ರೀ ಕೆ.ಆರ್. ವಿಜಯಕುಮಾರ್, ಶ್ರೀಮತಿ ಲೀಲಾ
ಮಗ : ಕೆ.ವಿ. ಸಂಕೇತ್, ದಾವಣಗೆರೆ.
ಶ್ರೀಮತಿ ಇಂದಿರ ನಾಗರಾಜ್ ಮತ್ತು ಮಕ್ಕಳು
ಅಳಿಯಂದಿರು, ಮೊಮ್ಮಕ್ಕಳು, ದಾವಣಗೆರೆ.
ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.
ನಾಡಿಗರ ವಂಶಸ್ಥರು, ಬೆಳವನೂರು. ಹಾಗೂ ಬಂಧು-ಮಿತ್ರರು.

## ಜಿಗಳಿ ಗ್ರಾಮದ ಬಿ.ಸಿ. ಸಿದ್ದೇಶ್ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ವಾಸಿ ಬಿಳಸನೂರು ಚಂದ್ರಪ್ಪನವರ ಪುತ್ರ ಬಿ.ಸಿ. ಸಿದ್ದೇಶ್ (40 ವರ್ಷ) ಇವರು ದಿನಾಂಕ 26.8.2024ರ ಸೋಮವಾರ ಬೆಳಗ್ಗೆ 11 ಗಂಟೆಗೆ ಅನಾರೋಗ್ಯದಿಂದಾಗಿ ನಿಧನರಾದರು. ಪತ್ನಿ, ತಂದೆ, ತಾಯಿ, ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.8.2024ರ ಮಂಗಳವಾರ ಬೆಳಿಗ್ಗೆ 12 ಗಂಟೆಗೆ ಜಿಗಳಿಯಲ್ಲಿ ನೆರವೇರಲಿದೆ.

# ಖರ್ಗೆ ಪುತ್ರನ ಟ್ರಸ್ಟ್‌ಗೆ ಜಮೀನು; ಸರ್ಕಾರದ ಸಮರ್ಥನೆ

**(1ನೇ ಪುಟದಿಂದ)** ಜಮೀನು ಪಡೆದಿದ್ದಾರೆ. ಪರಿಶಿಷ್ಟ ಜಾತಿ ಕೋಟಾದಡಿಯಲ್ಲಿ ಐದು ಎಕರೆ ವಿಸ್ತೀರ್ಣದ ಜಾಗವನ್ನು ಸರ್ಕಾರ ಮಂಜೂರು ಮಾಡಿದೆ. ಈ ಟ್ರಸ್ಟ್ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಸಂಸ್ಥೆಗಳ ಸ್ಥಾಪನೆಗಾಗಿ ಜಾಗ ಮಂಜೂರು ಮಾಡುವಂತೆ ಕೋರಿತ್ತು. ಅವರ ಅರ್ಜಿ ಮೇರೆಗೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಸ್ಥಳ ಮಂಜೂರು ಮಾಡಲಾಗಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಎಂ.ಬಿ.ಪಾಟೀಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಏರೋಸ್ಪೇಸ್ ಪಾರ್ಕ್‌ನಲ್ಲಿ ಸಿಎ ನಿವೇಶನವನ್ನು ಕಾನೂನು ಪ್ರಕಾರವೇ ನಿಗದಿತ ಬೆಲೆಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರ ನೀಡಿರುವ ಜಾಗದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸ್ಥಾಪಿಸುವುದಾಗಿ ತಿಳಿಸಿದ್ದು, ಬಿಜೆಪಿ ನಾಯಕ ಲೆಹರ್ ಸಿಂಗ್ ಆರೋಪಿಸಿರುವಂತೆ ಯಾವ ನಿಯಮವೂ ಉಲ್ಲಂಘನೆ ಆಗಿಲ್ಲ ಎಂದು ಹೇಳಿದ್ದಾರೆ.

ರಾಹುಲ್ ಖರ್ಗೆ ಐಐಟಿ ಪದವೀಧರರಾಗಿದ್ದು, ಅವರ ಕುಟುಂಬ ವಿವಿಧ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

ಕೆಐಎಡಿಬಿ ನಿಯಮಗಳ ಪ್ರಕಾರ ಸಿಎ ನಿವೇಶನಗಳಲ್ಲಿ ಆರ್ ಅಂಡ್ ಡಿ ಕೇಂದ್ರಗಳು, ಉತ್ಕೃಷ್ಟತಾ ಕೇಂದ್ರಗಳು, ತಾಂತ್ರಿಕ ಸಂಸ್ಥೆಗಳು, ಕೌಶಲ್ಯಾಭಿವೃದ್ಧಿ, ಸರ್ಕಾರಿ ಕಚೇರಿಗಳು, ಬ್ಯಾಂಕ್, ಆಸ್ಪತ್ರೆ, ಹೋಟೆಲ್, ಪೆಟ್ರೋಲ್‌ಬಂಕ್, ಕ್ಯಾಂಟೀನ್, ವಸತಿ ಸೌಲಭ್ಯ ಇತ್ಯಾದಿಗಳ ಅಭಿವೃದ್ಧಿಗೆ ಅವಕಾಶವಿದೆ. ಆಸಕ್ತರು ಯಾರು ಬೇಕಾದರೂ ಇದಕ್ಕೆ ಪ್ರಯತ್ನಿಸಬಹುದು, ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಶಿಫಾರಸಿನ ನಂತರವೇ ನಿವೇಶನಗಳ ಹಂಚಿಕೆಯಾಗುತ್ತದೆ ಎಂದು ಹೇಳಿದರು.

ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಕೈಗಾರಿಕಾ ಪ್ರದೇಶದಲ್ಲೇ 116 ಎಕರೆಯನ್ನು ಬರೀ 50 ಕೋಟಿ ರೂ.ಗೆ ನೀಡಲಾಗಿದೆ. ಇದರಿಂದ 137 ಕೋಟಿ ರೂ. ಬೊಕ್ಕಸಕ್ಕೆ ನಷ್ಟವಾಗಿದೆ. ಲೆಹರ್ ಸಿಂಗ್ ಅವರು ಈ ಬಗ್ಗೆ ಮಾತನಾಡಬಹುದಲ್ಲವೇ ? ಎಂದು ಪ್ರಶ್ನಿಸಿದರು.

ಈ ಮೊದಲು ಕೆಐಎಡಿಬಿ ಮಂಡಳಿಯೇ ಸಿಎ ನಿವೇಶನಗಳ ಹಂಚಿಕೆ ಮಾಡುತ್ತಿತ್ತು. ತಾವು ಅಧಿಕಾರ ವಹಿಸಿಕೊಂಡ ಮೇಲೆ ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನೆ ನೀಡುವ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲಾಗಿದೆ. ಮೊದಲ ಬಾರಿಗೆ ಸಿಎ ನಿವೇಶನಗಳ ಹಂಚಿಕೆಯಲ್ಲೂ ಪರಿಶಿಷ್ಟರಿಗೆ ಶೇ.24.10 ಮೀಸಲಾತಿ ಕಲ್ಪಿಸಲಾಗಿದೆ. ಲೆಹರ್ ಸಿಂಗ್ ಈ ಸತ್ಯ ಅರಿತು ಮಾತನಾಡುವುದು ಒಳ್ಳೆಯದು ಎಂದರು.

# ಕಡಕೋಳ - ದಾವಣಗೆರೆ ವೃತ್ತಿರಂಗಭೂಮಿ ರೆಪರ್ಟರಿಯ ಸಾರಥಿ

ಯಡ್ರಾಮಿ ಸೀಮೆಯ ಬೆಂಕಿಯ ಚಂಡಮಾರುತ ಹಾಗೂ ಉರಿಬಿಸಿಲಿನ ನಾಡಿನ ಒಬ್ಬ ಸಂತ, ಅನುಭಾವಿ, ತತ್ವಪದಗಳ ಹರಿಕಾರ ಕಡಕೋಳ ಮಡಿವಾಳಪ್ಪನ ನೆಲೆಯ ಬಸಿರಿನಿಂದ ಚಿಗುರೊಡೆದ ಮಲ್ಲಿಕಾರ್ಜುನ ಕಡಕೋಳ ಈಗ ಪ್ರತಿಷ್ಠಿತ "ದಾವಣಗೆರೆ ವೃತ್ತಿ ರಂಗಭೂಮಿ ರೆಪರ್ಟರಿ"ಯ ಸಾರಥಿ ಯಾ ನಿರ್ದೇಶಕ.

ಈ ವೃತ್ತಿರಂಗಭೂಮಿ ರೆಪರ್ಟರಿ ಹಲವು ದಶಕಗಳ ಕನಸು. ರಂಗಭೀಷ್ಮ ಬಿ ವಿ ಕಾರಂತರ ನೇತೃತ್ವದಲ್ಲಿ ಮೈಸೂರಿನ "ರಂಗಾಯಣ" ಆರಂಭವಾದಾಗ ಇಡೀ ರಾಜ್ಯಕ್ಕೆ ಒಂದೇ ರೆಪರ್ಟರಿ! ಈಗ ಅದೂ ವಿಕೇಂದ್ರೀಕರಣ ಆಗಿ ಆರು ರೆಪರ್ಟರಿಗಳಾಗಿವೆ. ಅವುಗಳ ಚುಕ್ಕಾಣಿ ಹಿಡಿಯಲು ಭಾರೀ ಪೈಪೋಟಿ. ಪ್ರತಿಭೆ, ಸಾಧನೆ, ಪ್ರಾದೇಶಿಕತೆ, ಜಾತಿ, ರಾಜಕಾರಣ ಎಲ್ಲಾ ಮಿಶ್ರಣದಲ್ಲಿ ಕಲಸುಮೇಲೋಗರವಾಗಿ "ಸಾಮಾಜಿಕ ನ್ಯಾಯ"ದ ತಕ್ಕಡಿ ಗುಲಗಂಜಿ ತೂಕದ್ದಾಗುತ್ತದೆ! ಹೀಗೆ ಆಯ್ಕೆ ಪಟ್ಟಿ ಹೊರಬಂದಾಗ ಒಂದಿಬ್ಬರಾದರು ಪ್ರತಿಭಾವಂತರು ಆ ಕ್ಷೇತ್ರಕ್ಕೆ ನ್ಯಾಯ ಒದಗಿಸುವವರು ಇದ್ದೇ ಇದ್ದಾರೆ ಅನ್ನೋದನ್ನು ಖಾತ್ರಿ ಪಡಿಸುವಂತೆ ಮಿತ್ರ ಮಲ್ಲಿಕಾರ್ಜುನ ಕಡಕೋಳ ರೆಪರ್ಟರಿಯ ಯಜಮಾನನಾಗಿ ಆಯ್ಕೆ ಆಗಿರುವುದು "ದಾವಣಗೆರೆ ರಂಗ ಬಳಗ"ಕ್ಕೆ ಅತೀವ ಸಂತೋಷ. ಹೀಗಾಗಿ ವೈಯಕ್ತಿಕವಾಗಿಯೂ ಈ ಗೆಳೆಯನಿಗೆ ಅಭಿನಂದನೆ.

ರೆಪರ್ಟರಿ ಅಧ್ಯಕ್ಷ ಮಲ್ಲಿಕಾರ್ಜುನ ಕಡಕೋಳ ಈ ಮೊದಲು ದಾವಣಗೆರೆಯನ್ನು ಆರೋಗ್ಯ ಇಲಾಖೆಯ ತನ್ನ ವೃತ್ತಿ ಬದುಕಿನ ನೆಲೆಯಾಗಿ ಆಯ್ಕೆ ಮಾಡಿಕೊಂಡ. ತನ್ನ ಪತ್ನಿಯು ಅದೇ ಇಲಾಖೆಯ ನೌಕರಿಯವರಾಗಿದ್ದರಿಂದ ಸಹಜವಾಗೇ ದಾವಣಗೆರೆ ಸುತ್ತಮುತ್ತಲ ನೂರಾರು ಹಳ್ಳಿಗಳ ಆರೋಗ್ಯ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಯ್ತು.

ಕಡಕೋಳ ಹೊಟ್ಟೆಪಾಡಿಗಾಗಿ ಸರ್ಕಾರಿ ನೌಕರಿ ಮಾಡಲಿಲ್ಲ. ಗ್ರಾಮೀಣರ ಆರೋಗ್ಯದ ಜೊತೆಗೆ ತನ್ನೊಳಗಿದ್ದ ಸಾಹಿತ್ಯ ಸಾಂಸ್ಕೃತಿಕ ವಿಚಾರಗಳಿಗೂ ತೆರೆದುಕೊಂಡು ಅದನ್ನು ಹಂಚಿದ. ಬರವಣಿಗೆಯನ್ನು ಸಾಮಾಜಿಕ ಅಸ್ತ್ರವಾಗಿ ಬಳಸಿದ. ಆರಂಭದಲ್ಲಿ ತನ್ನ ಪತ್ನಿ ಅನಸೂಯ ಹೆಸರಿನಲ್ಲಿ "ಮುಟ್ಟು" ಕಥೆ ಬರೆದ. ಅದು "ತುಷಾರ" ಪತ್ರಿಕೆಯಲ್ಲಿ ಪ್ರಕಟವಾಗಿ ಭಾರೀ ಚರ್ಚೆಗೆ ಒಳಗಾಗಿತ್ತು. ಮುಂದೆ "ಲಂಕೇಶ್ ಪತ್ರಿಕೆ"ಗೆ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ವರದಿ ಮಾಡಿದ. ಸಹಜವಾಗಿ ರಾಜಕಾರಣಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಯ್ತು. ಮುಂದೆ ರವಿ ಬೆಳಗೆರೆಯ "ಹಾಯ್ ಬೆಂಗಳೂರ್" ಪತ್ರಿಕೆಗೂ ವರದಿ ಮಾಡಿದ. ವಿಮರ್ಶೆ, ವ್ಯಕ್ತಿ ಚಿತ್ರಣ, ಲೇಖನಗಳನ್ನು ಸಾಂದರ್ಭಿಕವಾಗಿ ದಾಖಲಿಸಿದ. ಕ್ರಮೇಣ ಮೂಲದಲ್ಲಿ ಅಡಗಿದ್ದ ರಂಗಭೂಮಿಯ ತಿದಿ ಒತ್ತಿ ಅದರೊಳಗಿನ ಅನುಭವ ಗಣಿಯನ್ನು ಹೆಕ್ಕಿ ಹೊರ ತೆಗೆದ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ವೃತ್ತಿ ರಂಗಭೂಮಿ ಕಲಾವಿದರ ನಿಜ ಬದುಕಿನ ಕಷ್ಟಕಾರ್ಪಣ್ಯ ಹಾಗೂ ರಂಗದ ಮೇಲಿನ ಅಭಿನಯದ ನೈಜ ಕಲಾವಿದರ ಪರಿಚಯವನ್ನು ನಾಡಿನ ಹೆಸರಾಂತ ಪತ್ರಿಕೆಗಳಿಗೆ ಮಾಡಿದ. 'ಪ್ರಜಾವಾಣಿ' ಈ ದೈನಿಕಗಳಲ್ಲಿ ಮುಖ್ಯ ಪಾತ್ರವಹಿಸಿತು. ಮುಂದೆ ದಾವಣಗೆರೆ ದೈನಿಕ 'ಜನತಾವಾಣಿ' ಪತ್ರಿಕೆಗೆ ಅಂಕಣಕಾರನಾಗಿ ಪರಿಚಯವಾದ. ಇದಕ್ಕೆ ಈ ಪತ್ರಿಕೆಯ ಸಂಪಾದಕರಾಗಿದ್ದ ಎಚ್.ಎನ್. ಷಡಕ್ಷರಪ್ಪ ಅವರು ನೀಡಿದ



ಪ್ರೋತ್ಸಾಹ ಕಾರಣ. ಅಂಕಣ ಬರಹಗಳ ಸೊಗಸು, ಭಾಷೆ, ಲಯ ಸೌಂದರ್ಯಕ ವಿಚಾರಗಳು, ಮುನ್ನೋಟಗಳು, ನೆನಪುಗಳು ಓದುಗರಿಗೆ ಇಷ್ಟವಾಯಿತು. ಯಾವುದಾದರೂ ವಿಚಾರಗಳನ್ನು ಮನಕ್ಕೆ ತಾಕುವಂತೆ ಬರೆಯುವ ಕಲೆ ಮಲ್ಲಿಕಾರ್ಜುನ ಕಡಕೋಳಗೆ ಸಿದ್ದಿಸಿದೆ. ತತ್ವಪದಗಳ ಕುರಿತ ಅವನ ಗಂಭೀರ ಅಧ್ಯಯನ ಇದಕ್ಕೆ ಸ್ಪಷ್ಟ ಉದಾಹರಣೆ. 'ಜವಾರಿ ಭಾಷೆ' ಅಂತ ಏನಾದರೂ ನಾವು ಕರೆದರೆ ಅದು ಕಡಕೋಳನಲ್ಲಿ ಇದೆ. ಮಾತು - ಬರವಣಿಗೆಯಲ್ಲಿ ಅದು ಪ್ರತಿಬಿಂಬಿತವಾಗಿದೆ. ಹೀಗಾಗಿ 'ಅವಳ ಸನ್ನಿಧಿಯಲ್ಲಿ...', 'ರಂಗ ಸುನೇರಿ', 'ಫಲ್ಗುಣಿಯಲ್ಲಿ ಕೇಳಿ ಬಂದ ರುದ್ರವೀಣೆ', 'ಯಡ್ರಾಮಿ ಸೀಮೆಯ ಕಥನಗಳು', 'ಪರಿಮಳದ ಹಾದಿಯಲ್ಲಿ' ಮೊದಲಾದ ಕೃತಿಗಳನ್ನು ಕನ್ನಡಕ್ಕೆ ನೀಡಿದ. ಹಲವು ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಹಾಗೂ ರಾಜ್ಯದ ಹಲವು ಸಂಸ್ಥೆಗಳಿಂದ ಗೌರವ ಪುರಸ್ಕಾರ ದೊರೆತಿದೆ.

ತನ್ನ ಹುಟ್ಟು ಜಿಲ್ಲೆ ಕಲಬುರ್ಗಿಯ ಯಡ್ರಾಮಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನ ನೀಡಿ ಗೌರವಿಸಲಾಗಿದೆ. ವಿದ್ಯಾರ್ಥಿ ಆಗಿದ್ದಾಗಲೇ ಬಂಡಾಯ ಧೋರಣೆ ಹೊಂದಿ, ತುರ್ತುಸ್ಥಿತಿಯಲ್ಲಿ ಪ್ರತಿಭಟಿಸಿದ್ದಕ್ಕೆ ಪೊಲೀಸರಿಂದ ಲಾಠಿ ರುಚಿ ಉಂಡ ಅನುಭವ. ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಗತಿಪರ, ವೈಚಾರಿಕ ವಿಚಾರ ರೂಢಿಸಿಕೊಂಡ ಕಡಕೋಳಗೆ ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವಿದೆ.

ದಾವಣಗೆರೆ ಮೂಲತಃ ವ್ಯಾಪಾರಿ ಕೇಂದ್ರವಾದರೂ ಶಿಕ್ಷಣ ಕ್ಷೇತ್ರಕ್ಕೂ ಮಹತ್ವದ ಕಾಣಿಕೆ ನೀಡಿದೆ. ಮುಖ್ಯವಾಗಿ ವೃತ್ತಿರಂಗಭೂಮಿಗೆ ಮರುಜೀವ ಕೊಟ್ಟ ಊರು. ದಾನಿಗಳ ತವರು. ಉತ್ತರ ಕರ್ನಾಟಕದ ಅನೇಕ ನಾಟಕ ಕಂಪನಿಗಳ ಸಾಮಾಜಿಕ, ಪೌರಾಣಿಕ ನಾಟಕಗಳು ಜನಮನ ಗೆದ್ದಿವೆ. ನಷ್ಟದಲ್ಲಿದ್ದ ಕಂಪನಿಗಳು ಲಾಭ ಪಡೆದು ಕಲಾವಿದರಿಗೆ ಬದುಕು ನೀಡಿವೆ. ಇದೆಲ್ಲಾ ವಾಸ್ತವಗಳೂ, ಕಂಪನಿ, ಮಾಲೀಕ, ನಟ -ನಟಿಯರು, ಸಂಗೀತಗಾರರು ಎಲ್ಲಾ ಕಡಕೋಳಗೆ ಪರಿಚಿತರೆ. ಇಂಥ ಕಲಾವಿದರು ಹಾಗೂ ಕಂಪನಿ ಕುರಿತು ನಿರಂತರ ಲೇಖನ, ಅಂಕಣ ಬರಹ ಬರೆದು ಸರ್ಕಾರದ, ನಾಡಿನ ಪ್ರಜ್ಞಾವಂತರ ಗಮನ ಸೆಳೆಯುವಲ್ಲಿ ಯಶಸ್ವಿ ಆಗಿದ್ದಾನೆ.

ಹಿಂದೆ ತೊಂಬತ್ತರ ದಶಕದಲ್ಲಿ ರಾಜ್ಯ ನಾಟಕ ಅಕಾಡೆಮಿ ಸದಸ್ಯನಾಗಿದ್ದಾಗ ತಿಂಗಳ ಕಾರ್ಯಕ್ರಮ "ಬಾ ಅತಿಥಿ" ಮೂಲಕ ನಾಡಿನ ರಂಗ ದಿಗ್ಗಜರನ್ನು ದಾವಣಗೆರೆಗೆ ಕರೆಯಿಸಿ, ಅವರೊಂದಿಗೆ ಮುಕ್ತ ಚರ್ಚೆಗೆ ದಾರಿಮಾಡಿಕೊಟ್ಟಿದ್ದನ್ನ ರಂಗಾಸಕ್ತರು ಮರೆಯಲು ಸಾಧ್ಯವೇ ಇಲ್ಲ. ನಾನು ಹವ್ಯಾಸಿ ರಂಗಭೂಮಿ ಹಾಗೂ ಬೀದಿ ನಾಟಕಗಳ ಭೀಷ್ಮ ಎ.ಎಸ್. ಮೂರ್ತಿಯವರನ್ನು ಈ ಕಾರ್ಯಕ್ರಮಕ್ಕೆ ಬೆಂಗಳೂರಿನಿಂದ ಕರೆತಂದ ನೆನಪು ಇದೆ. ಕನ್ನಡ ಚಿತ್ರರಂಗದ ನಟಸಾರ್ವಭೌಮ ಡಾ. ರಾಜಕುಮಾರ್ ಅವರನ್ನು ಕರೆಯಿಸಿದ ಕಡಕೋಳ ಹಾಗೂ ಮಿತ್ರರು ವೃತ್ತಿ ರಂಗ ಕಲಾವಿದರ ಸಮಾವೇಶ ಮಾಡಲು ಕೈ ಜೋಡಿಸಿದ್ದು ಮಹತ್ವದ ಸಾಧನೆ.

ದಾವಣಗೆರೆಯಲ್ಲಿ ಆರು ವರ್ಷಗಳ ಹಿಂದೆ ಸರ್ಕಾರ ಆರಂಭಿಸಿದ "ವೃತ್ತಿರಂಗಭೂಮಿ ರೆಪರ್ಟರಿ"ಗೆ ಗ್ರಹಣ ಹಿಡಿದಿದೆ. ಅದು ಇತ್ತೆಂಬ ಕುರುಹು ಇಲ್ಲ! ಸಮೀಪದ ಕೊಂಡಜ್ಜಿಯಲ್ಲಿ ಈ ರೆಪರ್ಟರಿ ನೆಲೆಗೊಳ್ಳುವ ಕನಸು ಈಡೇರಿಲ್ಲ. ವಿಧಾನಪರಿಷತ್ತು ಮಾಜಿ ಸದಸ್ಯ ಮೋಹನ್ ಕುಮಾರ ಕೊಂಡಜ್ಜಿ ಇದರ ಬಗ್ಗೆ ಆಸಕ್ತರಾಗಿದ್ದು, ಅವರ ಸಹಕಾರ ಮುಖ್ಯವಾಗಿದೆ. ಅತ್ಯುತ್ತಮ ಸ್ಕೌಟ್ ಕೇಂದ್ರವಾಗಿ ಪರಿಚಯವಾದ ಸುಂದರ ಪ್ರದೇಶ ಕೊಂಡಜ್ಜಿ ಸಾಂಸ್ಕೃತಿಕವಾಗಿಯೂ ಶಾಶ್ವತ ಸ್ಥಾನ ಪಡೆಯಬೇಕಾಗಿದೆ. ಅಲ್ಲಿ ವೃತ್ತಿರಂಗಭೂಮಿ ರೆಪರ್ಟರಿ ನೆಲೆಗೊಳ್ಳಲು ಸಮಯ ಹಿಡಿಯಬಹುದು. ಇದಕ್ಕೆ ಜಿಲ್ಲಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆರ್ಥಿಕ ಸಹಾಯ ಮುಖ್ಯ.

ಹೆಸರಿಗೆ ಮಾತ್ರ ರೆಪರ್ಟರಿ ಇರುವ ದಾವಣಗೆರೆಯಲ್ಲಿ ಅದಕ್ಕೆ ಹೇಳಿದಂತೆ ಅದರ ಅಸ್ತಿತ್ವವೇ ಇಲ್ಲ. ಹಿಂದೆ ಇದ್ದ ನಿರ್ದೇಶಕ ಮಹಾಶಯರು ನಯಾಪೈಸೆ ಕೆಲಸ ಮಾಡದೆ ಕಾಲಹರಣ ಮಾಡಿ ಅದನ್ನು ಮತ್ತಷ್ಟು ಹಾಳು ಮಾಡಿದರು ಎಂದು ರಂಗಾಸಕ್ತರೇ ದೂಷಿಸುತ್ತಾರೆ. ಈಗ ಕಡಕೋಳ ಎದುರು ಹಲವು ಸವಾಲುಗಳಿವೆ. ಈ ಸಂಸ್ಥೆಗೆ ಭದ್ರ ಬುನಾದಿ ಹಾಕಿ ತಳಮಟ್ಟದಿಂದ ಕಟ್ಟಬೇಕಿದೆ. ಇಡೀ ರಾಜ್ಯಕ್ಕೆ ಇರುವ ಈ ಒಂದು ವೃತ್ತಿರಂಗಭೂಮಿ ರೆಪರ್ಟರಿಯನ್ನು ಎತ್ತರಕ್ಕೆ ಕೊಂಡೊಯ್ದು ದಾವಣಗೆರೆ ಹೆಸರನ್ನು ಗಟ್ಟಿಗೊಳಿಸುವ ಇಚ್ಛಾಶಕ್ತಿಬೇಕಿದೆ. ಕಡಕೋಳಗೆ ಇರುವ ಹಲವು ಕನಸುಗಳಲ್ಲಿ ಅಭಿನಯ ಪರಂಪರೆಯನ್ನು ಕಟ್ಟಿಕೊಡುವುದು, ನಶಿಸುತ್ತಿರುವ ರಂಗ ಗೀತೆಗಳ ಪರಂಪರೆಯನ್ನು ರಂಗದಮೇಲೆ ಕಲಾವಿದರೇ ಹಾಡುವಂತೆ ಶಾಸ್ತ್ರೀಯವಾಗಿ ಕಲಿಸುವುದು, ರಂಗಸಜ್ಜಿಕೆಯ ಪರಂಪರೆ ಯನ್ನು ಗತ ವೃತ್ತಿರಂಗಭೂಮಿಯನ್ನು ನೆನಪಿಸುವಂತೆ ಸ್ಮರಣೀಯಗೊಳಿಸುವುದು ಸೇರಿದೆ ಎಂಬುದು ಮುಖ್ಯ. ಈ ಎಲ್ಲಾ ಯೋಜನೆಗಳ ಕನಸುಗಳು ಈಡೇರಲಿ ಎಂದು ಆಶಿಸುತ್ತೇನೆ.

**- ಆರ್. ಜಿ. ಹಳ್ಳಿ ನಾಗರಾಜ,** ಬೆಂಗಳೂರು.
ಫೋ : 99005 66020

# ಅರ್ಹ ಕಟ್ಟಡ ಕಾರ್ಮಿಕರು ಮಾತ್ರವೇ ಇಲಾಖೆಯ ಸೌಲಭ್ಯ ಪಡೆದುಕೊಳ್ಳಬೇಕು



**ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಕರೆ**

ಹೊನ್ನಾಳಿ, ಆ. 26 - ಅರ್ಹ ಕಟ್ಟಡ ನಿರ್ಮಾಣ ಕಾರ್ಮಿಕರು ಮಾತ್ರವೇ ಕಾರ್ಮಿಕ ಇಲಾಖೆಯಿಂದ ಸಿಗುತ್ತಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಶಾಸಕ ಡಿ.ಜಿ.ಶಾಂತನಗೌಡ ಅವರು ಕರೆ ನೀಡಿದರು.

ಟಿಬಿ ವೃತ್ತದ ಕಾರ್ಮಿಕ ಕಚೇರಿಯ ಆವರಣದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ, ಮದುವೆಗೆ ಧನಸಹಾಯ ಸೇರಿದಂತೆ ಹಲವಾರು ಸೌಲಭ್ಯಗಳಿದ್ದು ಅರ್ಹ ಕಟ್ಟಡ ಕಾರ್ಮಿಕರು ಮಾತ್ರವೇ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಅವರು ಸಲಹೆ ನೀಡಿದರು.

ಕಾರ್ಮಿಕ ಇಲಾಖೆ ವತಿಯಿಂದ ಸಾಕಷ್ಟು ಸೌಲಭ್ಯಗಳು ಸಿಗುತ್ತಿರುವ ಹಿನ್ನೆಲೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಲ್ಲದವರು ಕಾರ್ಮಿಕ ಇಲಾಖೆಯ ಕಾರ್ಡ್‌ಗಳನ್ನು ಪಡೆದಿರುವ ಬಗ್ಗೆ ವಿಧಾನ ಸೌಧದಲ್ಲಿ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರೂ ಕೂಡ ಗಂಭೀರವಾಗಿ ಚರ್ಚೆ ನಡೆಸಿದ್ದು ಒಂದು ವೇಳೆ ಅನರ್ಹರು ಕಾರ್ಮಿಕ ಇಲಾಖೆಯ ಕಾರ್ಡ್‌ಗಳನ್ನು ಪಡೆದಿದ್ದರೆ ಅದು ಕಾನೂನು ರೀತ್ಯಾ ಶಿಕ್ಷಾರ್ಹ ಅಪರಾಧವೆಂದು ಎಚ್ಚರಿಸಿದರು.

ಕಾರ್ಮಿಕ ನಿರೀಕ್ಷಕರಾದ ಮುಮ್ತಾಜ್ ಅವರಿಗೆ ಅರ್ಹ ಕಾರ್ಮಿಕರಿಗೇ ಮಾತ್ರವೇ ಇಲಾಖೆಯ ಸೌಲಭ್ಯಗಳನ್ನು ವಿತರಿಸಬೇಕು, ಯಾವುದೇ ಕಾರಣಕ್ಕೂ ಅನರ್ಹರಿಗೆ ಕಾರ್ಮಿಕ ಇಲಾಖೆಯಿಂದ ಕಾರ್ಡ್‌ಗಳು ಸಿಗದಂತೆ ಕ್ರಮ ಜರುಗಿಸುವಂತೆ ಹಾಗೂ ಈಗಾಗಲೇ ಅನರ್ಹರು ಇಲಾಖೆಯಲ್ಲಿ ನೋಂದಣಿಯಾಗಿದ್ದರೆ ಅವುಗಳನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿದರು.

ಕಾರ್ಮಿಕ ನಿರೀಕ್ಷಕಿ ಮುಮ್ತಾಜ್ ಬೇಗಂ ಮಾತನಾಡಿ ಹಿರಿತನದ ಆಧಾರದ ಮೇಲೆ ಇಲಾಖೆಯು ನಿರ್ಧರಿಸಿದ ಕಾರ್ಮಿಕರಿಗೆ ಮಾತ್ರವೇ ಸೌಲಭ್ಯಗಳನ್ನು ಇಂದು ವಿತರಿಸಲಾಗುತ್ತಿದ್ದು ಈಗ ಸೌಲಭ್ಯಗಳು ಸಿಗದಿರುವವರಿಗೆ ಮತ್ತೆ ಸೌಲಭ್ಯಗಳನ್ನು ಕೊಡಲಾಗುತ್ತದೆ ಯಾರೂ ಚಿಂತಿಸುವ ಅಗತ್ಯವಿಲ್ಲವೆಂದು ತಿಳಿಸಿದರು.

ಇಂದು ಗಾರೆ ಕೆಲಸಗಾರರಿಗೆ 750, ಮಹಿಳಾ ಕಾರ್ಮಿಕರಿಗೆ 850 ನ್ಯೂಟ್ರೀಷಿಯನ್ ಮತ್ತು ಗಾರೆ ಸಹಾಯಕರಿಗೆ 130 ಕಿಟ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ದೂರುಗಳು ಬಂದ ಹಿನ್ನೆಲೆಯಲ್ಲಿ 2000ಕ್ಕೂ ಹೆಚ್ಚು ಅನರ್ಹ ಕಾರ್ಮಿಕರ ಕಾರ್ಡ್‌ಗಳನ್ನು ಇದುವರೆಗೂ ರದ್ದುಪಡಿಸಲಾಗಿದ್ದು ಇಲಾಖೆ ವತಿಯಿಂದ ಅನರ್ಹರು ಕಾರ್ಮಿಕ ಕಾರ್ಡ್‌ಗಳನ್ನು ಪಡೆದಿದ್ದು, ಕಂಡುಬಂದರೆ ನಿರಂತರವಾಗಿ ಕಾರ್ಡ್‌ಗಳನ್ನು ರದ್ದು ಪಡಿಸುವ ಕೆಲಸವನ್ನು ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ವಕ್ತಾರ ದರ್ಶನ್ ಬಳ್ಳೇಶ್ವರ್, ಕಾರ್ಮಿಕ ಇಲಾಖೆಯ ಪ್ರದೀಪ್, ನಾಗರಾಜ್, ಕಾರ್ಮಿಕ ಮುಖಂಡರಾದ ಕೊತುಂಬರಿ ರಾಜಪ್ಪ, ರಘು ಹವಳಿ, ನಟರಾಜ್, ಸೊರಟೂರು ಹನುಮಂತಪ್ಪ, ಮೋಹನ್, ಮಾರಿಕೊಪ್ಪ ಚಂದ್ರು, ಅಣ್ಣಪ್ಪ, ಗಣೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

# ವೈಟ್ನರ್ ಸಾಲು ಮೇಲೆ 'ಬೆಳಕು' ಚೆಲ್ಲಿದ ಸಿಎಂ ಸಿದ್ದರಾಮಯ್ಯ

(1ನೇ ಪುಟದಿಂದ) ಬೆಳಕು ಹರಿಸಿ ಅದರಲ್ಲಿನ ಅಕ್ಷರಗಳನ್ನು ತೋರಿಸುವ ವಿಡಿಯೋ ಒಂದನ್ನು ಸಾಮಾಜಿಕ ಜಾಲತಾಣದಲ್ಲಿ ಸಿದ್ದರಾಮಯ್ಯ ಹಂಚಿಕೊಂಡಿದ್ದಾರೆ.

ಮುಡಾ ಅಕ್ರಮವಾಗಿ ಸ್ವಾಧೀನಪಡಿಸಿ ಕೊಂಡ ನಮ್ಮ ಕುಟುಂಬದ ಜಮೀನಿಗೆ ಬದಲಿ ಭೂಮಿ ನೀಡುವಂತೆ ನನ್ನ ಪತ್ನಿ ಅರ್ಜಿ ಸಲ್ಲಿಸಿದ್ದರು. ತಮ್ಮ ಕುಟುಂಬದ ಜಮೀನನ್ನು ಮುಡಾ ವಶಕ್ಕೆ ಪಡೆದು ಅಭಿವೃದ್ಧಿಪಡಿಸಲಾದ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ಪ್ರಾಧಿಕಾರವು ಅಭಿವೃದ್ಧಿ ಪಡಿಸಿದ ಸಮಾನಾಂತರ ಬಡಾವಣೆಯಲ್ಲಿ ನಿವೇಶನ ಕೇಳಲಾಗಿತ್ತು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಅಲ್ಲಿ ನಿವೇಶನಗಳು ಲಭ್ಯವಿರದ ಕಾರಣಕ್ಕೆ 'ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ' ಎಂಬ ನಾಲ್ಕೈದು ಪದಗಳಿಗೆ ವೈಟ್ನರ್ ಹಾಕಿ, ಪ್ರಾಧಿಕಾರ ಅಭಿವೃದ್ಧಿ ಪಡಿಸಿದ ಸಮಾನಂತರ ಬಡಾವಣೆಯಲ್ಲಿ ನಿವೇಶನ ನೀಡಬೇಕೆಂದು ಮನವಿ ಮಾಡಿದ್ದಾರೆ. ಇದರಲ್ಲಿ ಟಿಪ್ಪಣಿಯೂ ಇಲ್ಲ, ಆದೇಶವೂ ಇಲ್ಲ, ಅಪ್ಪಣೆಯೂ ಇಲ್ಲ. ತನಗೆ ಸೇರಿದ ಭೂಮಿಯಲ್ಲೇ ನಿವೇಶನ ಕೊಡಿ ಎಂಬ ಮನವಿ ಅಷ್ಟೇ ಇದೆ ಎಂದು ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ, ಮುಡಾದಲ್ಲಿರುವ ಮೂಲ ದಾಖಲೆ ಮುಖ್ಯಮಂತ್ರಿ ಬಳಿ ಹೇಗೆ ಬಂತು? ಇಷ್ಟಕ್ಕೂ ಈ ಮೂಲ ದಾಖಲೆ ಮುಡಾದಲ್ಲಿ ದೆಯಾ? ಅಥವಾ ನಿಮ್ಮ ಮನೆಯಲ್ಲಿದೆಯಾ? ಎಂದು ಪ್ರಶ್ನಿಸಿದ್ದಾರೆ. ವೈಟ್ನರ್ ಅಡಿಯಲ್ಲಿ ಅಡಗಿಸಿಟ್ಟ ಅಕ್ಷರಗಳಿಗೆ ಟಾರ್ಚ್ ಹಾಕಿ ತಡಕಾಡುತ್ತಿರುವುದು ಮುಖ್ಯಮಂತ್ರಿಗಳಿಗೆ ಶೋಭೆಯಲ್ಲ ಎಂದಿದ್ದಾರೆ.

ಈ ದಾಖಲೆಯನ್ನೇಕೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ? ನ್ಯಾಯಾಲಯವನ್ನೂ ದಾರಿ ತಪ್ಪಿಸಲಾಗುತ್ತಿದೆ. ಜನರನ್ನು ದಿಕ್ಕು ತಪ್ಪಿಸಿದ ಹಾಗೆ ನ್ಯಾಯಾಲಯಕ್ಕೂ ಸುಳ್ಳು ಮಾಹಿತಿ ಕೊಟ್ಟು ಅಲ್ಲಿಯೂ ಟಾರ್ಚ್ ಬಿಟ್ಟು ತೋರಿಸುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

# ವೆಸ್ಟ್ ಲಂಡನ್ - ಕನ್ನಡಿಗರ ಹೆಮ್ಮೆಯ ಹೋಟೆಲ್





**'ಇಂಡಿಯನ್ ಸ್ಟ್ರೀಟ್ ಫುಡ್ ರೆಸ್ಟೋರೆಂಟ್'**



**ಮುಂಬಯಿಕರ್ ವಡಾಪಾವ್**

ಕನ್ನಡಿಗ ಯುವ ಮಿತ್ರರು ನವೀನ್ ಸುನಾಗ್, ಪ್ರವೀಣ್‌ಕುಮಾರ್, ದಾವಣಗೆರೆ ಮೂಲದವರು ಮತ್ತು ಶ್ರೀಮತಿ ಪ್ರಭಾವತಿ ಮಾಲಕ್ಕನವರ ಬೆಂಗಳೂರು ಇವರ ಸಾರತ್ಯದಲ್ಲಿ ಕಳೆದ ವರ್ಷ ಜೂಲೈನಲ್ಲಿ ವೆಸ್ಟ್ ಲಂಡನ್ನ ಹಾರೋ ನಗರದ ಕೆಂಟಂನ್ ರಸ್ತೆಯಲ್ಲಿ ಆರಂಭಿಸಿದರು.

ಭಾರತೀಯ ಜನತೆಯು ಹೆಚ್ಚು ಇಷ್ಟಪಡುವ ಸ್ಟ್ರೀಟ್ ಫುಡ್‌ಗಳಾದ ಮುಂಬಯ್ ಖ್ಯಾತಿಯ ವಡಾಪಾವ್, ಸಮೋಸಾ, ಸಬುದಾನ್, ಮಸಾಲಾ ಅವಲಕ್ಕಿ, ಈರುಳ್ಳಿ ಪಕೋಡ, ಮೆಣಸಿನಕಾಯಿ ಬೊಂಡಾ ಇತ್ಯಾದಿ ರುಚಿಕರ ತಿನಿಸುಗಳನ್ನು ಶುದ್ಧ ತೈಲ ಹಾಗೂ ಯಾವುದೇ ಬಣ್ಣಗಳ ಮಿಶ್ರಣವಿಲ್ಲದೆ ಕೇವಲ ಸಸ್ಯಹಾರಿ ಉಪಹಾರ ಭೋಜನಕ್ಕೆ ನೀಡುತ್ತಿದೆ.





- ಮಹಲಿಂಗಪ್ಪ ಎ.
maliartdvg@gmail.com
(ಲೇಖಕರು ಪ್ರಸ್ತುತ UK ಪ್ರವಾಸದಲ್ಲಿದ್ದಾರೆ)

ಬಾಣಸಿಗರು ಮುಂಬಯ್ ಅನುಭವೀ ಪರಿಣಿತರು ಮತ್ತು ಸಿಬ್ಬಂದಿಯನ್ನು ಅಡುಗೆ ಮತ್ತು ಆತಿಥ್ಯಕ್ಕೆ ನೇಮಿಸಿದೆ.

ರೆಸ್ಟೋರೆಂಟ್ ಬಗ್ಗೆ ಹೇಳುವುದಾದರೆ ಇಲ್ಲಿನ ವಾತಾವರಣಕ್ಕೆ ತಕ್ಕಂತೆ ಆಸನಗಳ ವ್ಯವಸ್ಥೆ, ಸಣ್ಣಪುಟ್ಟ ಸಭೆ ಸಮಾರಂಭಗಳು, ಕುಟುಂಬ ದಲ್ಲಿನ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ, ಸಂಘ-ಸಂಸ್ಥೆಗಳು ನಡೆಸುವ ಸಭೆಗಳಿಗೂ ಬಾಡಿಗೆಗೆ ಅಲ್ಲದೆ ನಗರದಲ್ಲಿ ನಡೆಯುವ ಯಾವುದೇ ಶಾಲಾ ಕಾಲೇಜುಗಳಲ್ಲಿ ಹಬ್ಬಗಳು ಮತ್ತು ಸಮಾರಂಭಗಳ ಸಂದರ್ಭದಲ್ಲಿಯೂ, ಮನವಿ ಮೇರೆಗೆ ಕೇಟರಿಂಗ್ ವ್ಯವಸ್ಥೆಯನ್ನು ವಿಶೇಷವಾದ ರೀತಿಯಲ್ಲಿಯೇ ಆಹಾರವನ್ನು ಸರಬರಾಜು ಮಾಡಲಾಗುವುದು.

ಸೋಮವಾರ ಹೊರತುಪಡಿಸಿ ಉಳಿದೆಲ್ಲ ದಿನಗಳಲ್ಲಿಯೂ ಮುಂಜಾನೆ 11.30 ರಿಂದ 3.30 ಮತ್ತು ಸಂಜೆ 5.30 ರಿಂದ 9.30ರವರೆಗೂ ತೆರೆದಿರುತ್ತದೆ.

ಗ್ರಾಹಕರ ಬೇಡಿಕೆಗಳನ್ನು ಕೇವಲ 15 ನಿಮಿಷಗಳಲ್ಲಿ ಪೂರೈಸುತ್ತದೆ. 12 ಜೂಲೈ 2024ಕ್ಕೆ ಒಂದು ವರ್ಷ ಪೂರೈಸುತ್ತಿದ್ದು, 2ನೇ ವರ್ಷದ ಆರಂಭದಲ್ಲಿ ಉತ್ತರ ಭಾರತೀಯ ಶೈಲಿಯ ಭೋಜನಗಳನ್ನು ಜೊತೆಗೆ ಪರವಾನಿಗೆ ಹೊಂದಿರುವ ವಿವಿಧ ಮದ್ಯಗಳು ಸೇವೆಯಲ್ಲಿರುತ್ತವೆ.

ಕನ್ನಡ ನಾಡಿನ ಮಿತ್ರರು ಮುಂಬಯ್‌ಯ ಬಾಣಸಿಗರು ಮತ್ತು ಸೇವಕರ ತಂಡವು ಲಂಡನ್ ಜೆತೆಗೆ ಇಂಡಿಯನ್ ಸ್ಟ್ರೀಟ್ ಫುಡ್ ಪ್ರಖ್ಯಾತ ಶುದ್ಧ ಸಸ್ಯಹಾರದ ತಿಂಡಿ, ಊಟಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಲಿ. ಮುಂದಿನ ದಿನಗಳಲ್ಲಿ ದಾವಣಗೆರೆಯ ಬೆಣ್ಣೆದೋಸೆ ಸವಿಯನ್ನು ಪರಿಚಯಿಸಲಿ ಎಂದು ಆಶಿಸೋಣವೇ.


**ಬೇಕರಿ ಸಾಮಾನುಗಳು ಮಾರಾಟಕ್ಕಿವೆ**
ಸಂಪರ್ಕಿಸಿ :
96200 65455

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ : **ಬುನಿಯಾದ್**
ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ-2.
98445 82000

**ಕಾರುಗಳು ಮಾರಾಟಕ್ಕಿವೆ**
Maruthi Celerio Automatic
Hyundai Eon Sportz
Vitara Brezza ZDI+
Tata Nexon Automatic
ದೈವಿಕ್ ಐನಳ್ಳಿ
99456 43223

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**Property Hub**
• EC
• E-swathu
• Building Licence
• Khatha Change
96118 66449

**ಪಾರ್ಟ್ ಟೈಂ/ಫುಲ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ**
SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರಿಗೆ ತರಬೇತಿ ಜೊತೆಗೆ ವೇತನ.
**ಜ್ಯೋತಿ ಮೆಟಲ್ಸ್**
ಗ್ಯಾಸ್/ಎಲೆಕ್ಟ್ರಿಕ್ ಗೀಸರ್,ವಾಟರ್ ಪ್ಯೂರಿಫೈಯರ್, ಸೋಲಾರ್ ಸೇಲ್ಸ್ & ಸರ್ವೀಸ್, ದಾವಣಗೆರೆ.
98800 34643, 94800 51462

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಬೇಕಾಗಿದ್ದಾರೆ**
ದ್ವಿಚಕ್ರ ಹೊಂದಿರುವ ಕಂಪ್ಯೂಟರ್ ಜ್ಞಾನವಿರುವ ಪುರುಷ ಅಕೌಂಟೆಂಟ್ ಬೇಕಾಗಿದ್ದಾರೆ.
94485 62862

**WANTED**
Helpers Ladies / Gents
SSLC Passed or failed
Timings : 10.30 to 8.00 PM
Contact :
Cindrella Chocolate Shop
Vidyanagar 1st Bustop, Davanagere.
ಮೊ : 63603 34198

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**KAIDB**
Furniture Factory for Rent, Davanagere. 4000 Sqft.
98459 77475

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**WANTED**
Female Nurses to Work In a Reputed Hospital In Davanagere. Good Salary. Call Us On
80735 15690

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**REQUIREMENT**
Receptionist
Age : 20-25
Salary: 10000 - 12000
Hairpoint Hair & beauty lounge, MCC `B' block, 7th main, 3rd cross, Davanagere.
9738664400, 08192220755

**WANTED**
Sales supervisor Required
Contact :
Devi Industry
Davanagere
99164 29793

**ಸೈಟುಗಳು ಮಾರಾಟಕ್ಕಿವೆ**
ಕೊಂಡಜ್ಜಿ - ಬುಳ್ಳಾಪುರದಲ್ಲಿ, ಕೆಹೆಚ್‌ಬಿ ಲೇಔಟ್‌ನಲ್ಲಿ 25x30 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
96111 44565
97434 47178

**ಮನೆ ಬಾಡಿಗೆಗಿದೆ**
#3993/60/3 20ನೇ ಮೇನ್ ರೋಡ್ 20ನೇ ಕ್ರಾಸ್ ವೆಂಕಟೇಶ್ವರ ಬಡಾವಣೆ, ಎಂಸಿಸಿ ಬಿ ಬ್ಲಾಕ್ ಕುವೆಂಪು ನಗರ ದಾವಣಗೆರೆ ಸಿಂಗಲ್ ಬೆಡ್ರೂಮ್ ಮನೆ ಬಾಡಿಗೆಗೆ ಇದೆ.
94485 34006

**ಸಬ್ಸಿಡಿ ಲೋನ್ ದೊರೆಯುತ್ತದೆ**
ಎಲ್ಲಾ ರೀತಿಯ ಬಿಸಿನೆಸ್ ಮಾಡುವವರಿಗೆ ಸಬ್ಸಿಡಿ ಲೋನ್ ದೊರೆಯುತ್ತದೆ ಹಾಗೂ ಎಲ್ಲಾ ತರಹದ ಸಾಲಸೌಲಭ್ಯಗಳಿಗಾಗಿ ಸಂಪರ್ಕಿಸಿರಿ :
87921 02232, 9113022187

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 6 ಕಿ.ಮೀ. ಹತ್ತಿರದ ಪುಟಗನಾಳ ಗ್ರಾಮಕ್ಕೆ ಹೊಂದಿಕೊಂಡಿರುವ ಕೆಂಪು ಮಸಾರಿ ಹೊಲ, ಅಡಿಕೆ ಗಿಡ ಹಾಕಲು ಸೂಕ್ತವಾದ 4 ಎಕರೆ 16 ಸೇಂಟ್ಸ್ ಜಮೀನಿದೆ. 1 ಬೋರ್ ಇದೆ.
90084 15137, 63609 35608

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : **ದೊಡ್ಡಬಾತಿ**
88920 08800

**WANTED**
S.V.MARKETING DAVANGERE
* Marketing Executive
* Accountant
* godown Incharge
63620 23451, 97434 37003

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857


# ನೆಲಕ್ಕುರುಳಿತು ಶಿವಾಜಿ ಪ್ರತಿಮೆ

(1ನೇ ಪುಟದಿಂದ) ರಾಜ್ಯ ಸರ್ಕಾರವೇ ಹೊಣೆ. ಈ ಬಗ್ಗೆ ಸರ್ಕಾರ ಸೂಕ್ತ ಕಾಳಜಿ ವಹಿಸಿಲ್ಲ. ಸರ್ಕಾರ ಕಾಮಗಾರಿಯ ಗುಣಮಟ್ಟವನ್ನು ಕಡೆಗಣಿಸಿತ್ತು ಎಂದಿದ್ದಾರೆ.

ಮಹಾರಾಷ್ಟ್ರ ಸರ್ಕಾರ ಕಮೀಷನ್ ಆಧಾರದ ಮೇಲೆ ಟೆಂಡರ್ ಹಾಗೂ ಗುತ್ತಿಗೆ ನೀಡುತ್ತಿದೆ ಎಂದವರು ಆರೋಪಿಸಿದ್ದಾರೆ.

ಶಿವಸೇನೆ (ಯುಬಿಟಿ) ಶಾಸಕ ವೈಭವ್ ನಾಯಕ್ ಅವರು ಹೇಳಿಕೆ ನೀಡಿದ್ದು, ಪ್ರತಿಮೆಯ ಕಾಮಗಾರಿ ಕಳಪೆಯಾಗಿದೆ. ಈ ಘಟನೆಯ ಸಂಪೂರ್ಣ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಹಾರಾಷ್ಟ್ರ ಸಚಿವ ದೀಪಕ್ ಕೇಸರ್ಕಾರ್, ಘಟನೆಯ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು. ಅದೇ ಸ್ಥಳದಲ್ಲಿ ಹೊಸ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ.

# ಆಸ್ತಿ ನೋಂದಣಿಗೆ ಆಧಾರ್ ಕಡ್ಡಾಯಗೊಳಿಸಿ ಆದೇಶ

(1ನೇ ಪುಟದಿಂದ) ಶೇಕಡ 99.99 ಮಂದಿ ಬಳಿ ಆಧಾರ್ ಕಾರ್ಡ್ ಇದೆ. ಈ ದಾಖಲೆ ಇಲ್ಲದವರು, ಮೇಲೆ ನಮೂದಿಸಲಾದ ಮೂರರಲ್ಲಿ ಯಾವುದಾದರೂ ಒಂದು ದಾಖಲೆಯನ್ನು ಒದಗಿಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು.

ಯಾರದೋ ಜಮೀನನ್ನು ಯಾರಿಗೋ ಮಾರಾಟ ಮಾಡಿ ಮೂಲ ಮಾಲೀಕರು ನ್ಯಾಯಾಲಯಕ್ಕೆ ಅಲೆಯುವಂತಾಗಿದೆ. ಇದನ್ನು ತಪ್ಪಿಸುವ ಉದ್ದೇಶದಿಂದಲೇ ನಾವು ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಜನರು ಸಹಕರಿಸಬೇಕು ಎಂದು ಮನವಿ ಮಾಡಿದರು. ಜಮೀನುಗಳನ್ನು ದೋಚಿ ಗೂಂಡಾ ವರ್ತನೆ ಮಾಡುವವರ ವಿರುದ್ಧ ಇನ್ನು ಮುಂದೆ ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳುತ್ತೇವೆ ಎಂದರು.

ನಾಗರಿಕರ ಅನುಕೂಲಕ್ಕಾಗಿ ಆಯಾ ಜಿಲ್ಲೆಯಲ್ಲಿರುವ ಯಾವುದೇ ನೋಂದಣಿ ಕಚೇರಿಯಲ್ಲಿ ತಮ್ಮ ಆಸ್ತಿಯನ್ನು ಮಾರಾಟ ಮಾಡಲು ಹಾಗೂ ಖರೀದಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ಸಚಿವರು ಹೇಳಿದರು.

ರಾಜ್ಯದಲ್ಲಿ 257 ನೋಂದಣಿ ಕಚೇರಿಗಳಿದ್ದು, ಅದರಲ್ಲಿ 50 ಕಚೇರಿಗಳಲ್ಲಷ್ಟೇ ಹೆಚ್ಚು ಕೆಲಸದ ಒತ್ತಡ ಇದೆ. ಉಳಿದೆಡೆ ಅಂತಹ ಒತ್ತಡಗಳಿಲ್ಲ. ನಾಗರಿಕರು ನೋಂದಣಿಗಾಗಿ ಕಾಯುವ ಬದಲು, ಎಲ್ಲಿ ಒತ್ತಡ ಇಲ್ಲವೋ ಅಂತಹ ಕಡೆಗಳಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು.

## ಸಂತೇಬೆನ್ನೂರು ಈಶ್ವರೀಯ ವಿವಿಯದಲ್ಲಿ ರಕ್ಷಾ ಬಂಧನ



ಸಂತೇಬೆನ್ನೂರು, ಆ. 26 - ಇಲ್ಲಿನ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ರಕ್ಷಾ ಬಂಧನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಹೊನ್ನಾಳಿ ಸೇವಾ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ಅವರು ಉಪಸ್ಥಿತರಿದ್ದು, ರಕ್ಷಾ ಬಂಧನದ ಮಹತ್ವ ತಿಳಿಸಿದರು. ವಿಶೇಷವಾಗಿ ನಾವು ಭಾರತೀಯರು ಶ್ರಾವಣ ಮಾಸದ ನೂಲು ಉಣ್ಣಿಮೆ ಯಂದು ಆಚರಿಸುವ ಹಬ್ಬವೇ ರಕ್ಷಾ ಬಂಧನ ಆಗಿದೆ. ಇದು ಸ್ನೇಹ ಸೂತ್ರದಲ್ಲಿ ನಮ್ಮೆಲ್ಲರನ್ನೂ ಸಂಬಂಧದಲ್ಲಿ ತರುವಂತಹ ಹಬ್ಬವಾಗಿದೆ ಎಂದು ತಿಳಿಸಿ, ಎಲ್ಲರಿಗೂ ರಾಖಿ ಕಟ್ಟಿದರು.

ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಸೇವಾ ಕೇಂದ್ರದ ಸಂಚಾಲಕರಾದ ಬ್ರಹ್ಮಾಕುಮಾರಿ ಮಮತ ಅವರು ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಭಾಗ್ಯ ವಿಜಯ, ಶಿಕ್ಷಕರಾದ ಪ್ರಕಾಶ್, ವೀಣಾ, ವೆಂಕಟೇಶ್, ರಾಮಚಂದ್ರ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ನಿರಾಸಕ್ತಿ, ತಾತ್ಸಾರ ದೂರವಿಡಿ, ಸಮಾಜದ ಸಂಘಟನೆಗೆ ಮುಂದಾಗಬೇಕು

### ಶ್ರೀ ಮಡಿವಾಳ ಮಾಚಿ ದೇವರ ಸ್ಮರಣೋತ್ಸವದಲ್ಲಿ ಮಾಚಿದೇವ ಮಹಾಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ

ದಾವಣಗೆರೆ, ಆ. 26 - ಮಡಿವಾಳ ಸಮುದಾಯವು ಸಂಘಟನೆಯಲ್ಲಿ ಹಿಂದೆ ಉಳಿಯಲು ಹೋರಾಟದ ಮನೋಭಾವ ಕಡಿಮೆ ಇರುವುದೂ ಸಹ ಒಂದು ಕಾರಣ ಎಂದು ಚಿತ್ರದುರ್ಗ ಮಾಚಿದೇವ ಮಹಾಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದರು.

ಸ್ಥಳೀಯ ವಿನೋಬ ನಗರದ ಶ್ರೀ ಮಾಚಿದೇವ ಸಮುದಾಯ ಭವನದಲ್ಲಿ ಇಂದು ನಡೆದ ಶ್ರೀ ಮಡಿವಾಳ ಮಾಚಿ ದೇವರ ಶ್ರಾವಣ ಮಾಸದ ಸ್ಮರಣೋತ್ಸವ ಕಾರ್ಯಕ್ರಮ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

ಹಸಿವು ಮತ್ತು ಅವಮಾನಕ್ಕೆ ಒಳಗಾದವರು ಹೋರಾಟದಿಂದ ಸಮಾಜದಲ್ಲಿ ಉತ್ತಮ ಸ್ಥಾನಕ್ಕೇರಿರುವುದು ಕಾಣಬಹುದು. ಆದರೆ ನಮ್ಮ ಸಮುದಾಯದಲ್ಲಿ ಯಾರೂ ಕೂಡ ಸಮಾಜದ ಬಗ್ಗೆ ಅಭಿಮಾನ ಇಟ್ಟುಕೊಳ್ಳದೆ ಸಂಘಟಿತರಾಗದ ಕಾರಣ ಯಾವುದೇ ಪಕ್ಷಗಳಾಗಲೀ, ಸರ್ಕಾರಗಳಾಗಲೀ ನಮ್ಮನ್ನು ಗುರುತಿಸಲು ಮುಂದಾಗುತ್ತಿಲ್ಲ ಎಂದರು.

ಸಮುದಾಯದ ಮೇಲಿನ ನಿರಾಸಕ್ತಿ, ತಾತ್ಸಾರ ದೂರವಿಟ್ಟು ಸಮಾಜದ ಕೆಲಸ ಮಾಡಬೇಕು. ಸಮಾಜದ ಮುಂದಿನ ಪ್ರಜೆಗಳು ಈ ಹಂತವನ್ನು ಪರಿಪಕ್ವತೆಯಿಂದ ಮುನ್ನಡೆಸಿದಲ್ಲಿ ನಿರೀಕ್ಷಿತ ಸಾಧನೆ ಮಾಡಲು ಸಾಧ್ಯ. ಸಮುದಾಯದ ಅಭಿವೃದ್ಧಿಗೆ ದುಡಿಯಬೇಕು. ನಾವೆಲ್ಲರೂ ಸೇರಿ ಸಮುದಾಯದ ಅಭಿವೃದ್ಧಿ ಮಾಡೋಣ ಎಂದು ತಿಳಿಸಿದರು.



ಯಾವ ಮೀಸಲಾತಿ ಬಂದರೂ ನಮ್ಮ ಗುರಿಯ ಸಾಧನೆ ಮಾಡಬೇಕು. ಮೀಸಲಾತಿ ಬಂದರೆ ಸಾಕಷ್ಟು ಲಾಭ ಇದೆ. ಸರ್ಕಾರ ಸಹ ಸಣ್ಣ ಸಮುದಾಯದತ್ತ ಹೆಚ್ಚು ಗಮನ ನೀಡಬೇಕು. ಅದಕ್ಕಾಗಿ ಮಡಿವಾಳ ಸಮುದಾಯವು ಹೆಚ್ಚು ಹೆಚ್ಚು ಸಂಘಟಿತರಾಗುವ ಮೂಲಕ ಸರ್ಕಾರಗಳಿಗೆ, ರಾಜಕೀಯ ಪಕ್ಷಗಳಿಗೆ ನಮ್ಮ ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಅನೇಕ ದಾರ್ಶನಿಕರು ತಮ್ಮನ್ನು ತಾವು ಸುಟ್ಟುಕೊಂಡು ಜಗತ್ತಿಗೆ ಬೆಳಕು ನೀಡಿದವರು. ಮಡಿವಾಳ ಮಾಚಿದೇವರು ನಮ್ಮ ಕುಲದ ತಿಲಕರು. ಅವರಿಂದ ಸಮಾಜಕ್ಕೆ ಹೆಸರು ಬಂದಿದೆ. ಹಣ ಗಳಿಸುವ ಜೊತೆಗೆ ಜ್ಞಾನದ ಶಕ್ತಿ ನೀಡಿರುವ ಕಾರಣಕ್ಕೆ ಅವರು ಸದಾ ಪ್ರಾತಃ ಸ್ಮರಣೀಯರು ಎಂದು ಬಣ್ಣಿಸಿದರು.

ಶ್ರೀ ಮಡಿವಾಳ ಮಾಚಿದೇವರು ನಮ್ಮ ಕುಲದ ಉದ್ಧಾರಕ. ಹೀಗಾಗಿ ಪೂಜಿಸಬೇಕು. ಅವರು ಸಮಾಜಕ್ಕೆ ನೀಡಿರುವ ಪ್ರತಿಯೊಂದು ವಚನದಲ್ಲಿ ಜೀವನದ ಅನುಭವ ಮತ್ತು ಮಾರ್ಗದರ್ಶನ ಇದೆ. ಹಾಗಾಗಿಯೇ ವಚನಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮಾತ್ರವಲ್ಲ ಸಾಗಬೇಕು ಎಂದು ತಿಳಿಸಿದರು.

ಸಮಾಜದ ಕಾರ್ಯಾಧ್ಯಕ್ಷ ಆವರಗೆರೆ ಎಚ್.ಜಿ. ಉಮೇಶ್ ಮಾತನಾಡಿ, ಮಡಿವಾಳ ಸಮಾಜದ ಮಕ್ಕಳು ಯಾರೂ ಕೂಡಾ ಉನ್ನತ ಶಿಕ್ಷಣ ಪಡೆಯಲು ಆಗಿಲ್ಲ. ಬಹಳಷ್ಟು ಜನರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಉನ್ನತ ಶಿಕ್ಷಣ, ಹುದ್ದೆಗೇರಲು ಅನುಕೂಲ ಆಗುವಂತೆ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕು ಎಂದು ಹೋರಾಟ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಸಮಾಜದ ಮಕ್ಕಳು ಓದಿನ ಕಡೆಗೆ ಹೆಚ್ಚು ಗಮನ ನೀಡಬೇಕು. ಉತ್ತಮ ಶಿಕ್ಷಣ ಪಡೆದಲ್ಲಿ ಎಲ್ಲೆಡೆ ಉತ್ತಮ ಸ್ಥಾನಮಾನ ದೊರೆಯುತ್ತದೆ. ವಿಶೇಷವಾಗಿ ಮಕ್ಕಳು ಮೊಬೈಲ್ ದಾಸ್ಯದಿಂದ ಹೊರ ಬರಬೇಕು. ಮನೆಯಿಂದ ಶಾಲೆ, ಕಾಲೇಜು ಹೋಗುವವ ರೆಗೂ ಮೊಬೈಲ್ ನಲ್ಲೇ ಮುಳುಗಿ ಹೋಗುವುದು ಕಂಡು ಬರುತ್ತದೆ. ಗೆಳೆಯರ ಬಗ್ಗೆ ಹೆಚ್ಚು ಜಾಗೃತಿ ವಹಿಸಬೇಕು. ತಂದೆ ತಾಯಂದಿರು ಸಹ ಮಕ್ಕಳ ಅಭ್ಯಾಸದ ಬಗ್ಗೆ ಗಮನ ಹರಿಸಬೇಕು ಎಂದು ತಿಳಿಸಿದರು.

ಮೂಡ ಬಿದಿರೆಯ ಶ್ರೀ ಕ್ಷೇತ್ರ ಕರಿಂಜೆಯ ಶ್ರೀ ಮುಕ್ತಾನಂದ ಸ್ವಾಮೀಜಿ ಸಾನ್ನಿಧ್ಯ, ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘದ ಜಿಲ್ಲಾಧ್ಯಕ್ಷ ಎಂ.ನಾಗೇಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನ ಕುಮಾರ್, ಆರ್.ಎನ್. ಧನಂಜಯ, ಸುರೇಶ್ ಕೋಗುಂಡೆ, ಅಂಜಿನಪ್ಪ ಪೂಜಾರ್, ಎಂ.ಎನ್. ಬಸವರಾಜಪ್ಪ, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಎಸ್. ಮಹಂತೇಶ್ ಇತರರು ಇದ್ದರು.

## ಹರಪನಹಳ್ಳಿ ಟಿಎಪಿಸಿಎಂಎಸ್‌ಗೆ 11.64 ಲಕ್ಷ ರೂ. ಲಾಭ



ಹರಪನಹಳ್ಳಿ, ಆ. 26 - ಪಟ್ಟಣದ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು (ಟಿಎಪಿಸಿಎಂಎಸ್) 2023-24ನೇ ಸಾಲಿನಲ್ಲಿ 11.64 ಲಕ್ಷ ರೂ. ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷೆ ಎಚ್. ನೇತ್ರಾವತಿ ಪರಶುರಾಮ ತಿಳಿಸಿದರು.

ಪಟ್ಟಣದ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸಭಾಂಗಣದಲ್ಲಿ ಸೋಮವಾರ ನಡೆದ ಸಂಘದ 94ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತಮಾಡಿದರು.

ಸಂಘವು ಕಳೆದ ಸಾಲಿನಲ್ಲಿ ರಸಗೊಬ್ಬರ ಮತ್ತು ಪೆಟ್ರೋಲ್ ಬಂಕ್ ಉತ್ಪನ್ನಗಳನ್ನು ಸೇರಿ ಒಟ್ಟು 12.38 ಕೋಟಿ ರೂ. ವ್ಯವಹಾರ ಮಾಡಿ 11.64 ಲಕ್ಷ ರೂ.ಲಾಭ ಗಳಿಸಿದೆ, ಲಾಭ ಮತ್ತು ವ್ಯವಹಾರ ಹಾಗೂ ಬಾಡಿಗೆಗಳ ಆದಾಯ ಸೇರಿ ಬಿಡಿಪಿ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಘವು 3.8 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಸಂಘದಿಂದ ರೈತರಿಗೆ ರಸಗೊಬ್ಬರ ಪೂರೈಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯವಹಾರಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಸಂಘದ ಎಲ್ಲಾ ಸದಸ್ಯರು ರಸಗೊಬ್ಬರ ಖರೀದಿ ಮಾಡಬೇಕೆಂದು ಮನವಿ ಮಾಡಿದರು. ಸಿಎನ್‌ಜಿ ಗ್ಯಾಸ್ ಬಂಕ್‌ನ್ನು ತೆರೆಯಲು ಸಂಘ ಪ್ರಯತ್ನಿಸಿದೆ ಎಂದು ಅವರು ತಿಳಿಸಿದರು.

ಸಂಘದ ನಿರ್ದೇಶಕ ಎಲ್.ಬಿ. ಹಾಲೇಶ 2023-24ನೇ ಸಾಲಿನ ಸಂಘದ ವಾರ್ಷಿಕ ವರದಿಯನ್ನು ಸಭೆಯಲ್ಲಿ ಓದಿ ಮಂಡಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬಿ. ಕುಲಮಿ ಅಬ್ದುಲ್ಲಾ, ನಿರ್ದೇಶಕ ಬಿ.ಕೆ. ಪ್ರಕಾಶ, ಎಲ್.ಬಿ. ಹಾಲೇಶ ನಾಯ್ಕ್, ಪಿ. ಪ್ರೇಮಕುಮಾರ, ತಳವಾರ ಮಂಜಪ್ಪ, ಗಿಡ್ಡಳ್ಳಿ ನಾಗರಾಜ, ಬಿ. ರೇವಣಸಿದ್ದಪ್ಪ, ಎಂ.ವಿ. ಕೃಷ್ಣಕಾಂತ, ಕೆ. ವಿರುಪಾಕ್ಷಪ್ಪ, ಪ್ರಕಾಶಗೌಡ, ನಾಮನಿರ್ದೇಶಕ ಚಿಕ್ಕೇರಿ ಬಸಪ್ಪ, ಸಂಘದ ಕಾರ್ಯದರ್ಶಿ ಎಚ್. ತಿರುಪತಿ ಸೇರಿದಂತೆ ಸಂಘದ ಸರ್ವ ಸದಸ್ಯರು ಸಿಬ್ಬಂದಿ ಇದ್ದರು.

## ಅನನ್ಯ ವಿದ್ಯಾ ದೇಗುಲ, ಆಚಾರ್ಯ ಶ್ರೀ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 27 - ಮೀಡಿಯಾ ಸ್ಟಡಿ ಸೆಂಟರ್ ಹಾಗೂ ಪರಿಷತ್ ಸಂಸ್ಥೆಯ ಸಹಭಾಗಿತ್ವದಲ್ಲಿ ಉತ್ಕೃಷ್ಟ ಶಿಕ್ಷಣ ನೀಡುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ 'ಅನನ್ಯ ವಿದ್ಯಾ ದೇಗುಲ' ಹಾಗೂ ಅತ್ಯುತ್ತಮ ಸಾಧನೆಗೈದ ಶಿಕ್ಷಕರಿಗೆ 'ಆಚಾರ್ಯ ಶ್ರೀ- 2024' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಆಸಕ್ತ ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರು ತಮ್ಮ ಸ್ವವಿವರ ಹಾಗೂ ಸೇವಾ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 15ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಸೂಚಕರು ಸಹ ನಾಮ ನಿರ್ದೇಶನ ಮಾಡಬಹುದು. ಅರ್ಜಿಯನ್ನು mediavisionbng@gmail.com ಗೆ ಮೇಲ್ ಮಾಡಬಹುದು. ಮಾಹಿತಿಗಾಗಿ 7259456555, 8095175780 ಸಂಪರ್ಕಿಸಿ.

## ಇಂದು ಆನ್‌ಲೈನ್‌ನಲ್ಲಿ ಶರಣ ಚಿಂತನಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಇಂದು ಸಂಜೆ 7 ರಿಂದ 9 ರವರೆಗೆ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ನಡೆಯಲಿದೆ.

ಬೆಂಗಳೂರಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಣಪತಿ ಬಿ. ಸಿನ್ನೂರ್ ಅವರು 'ಶೂನ್ಯ ಸಂಪಾದನೆಯತ್ತ ಒಂದು ಹೆಜ್ಜೆ : ಸಾಧನೆ ಮತ್ತು ಸವಾಲು' ಎಂಬ ವಿಷಯವಾಗಿ ಅನುಭಾವದ ನುಡಿಗಳನ್ನಾಡುವರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಗೂಗಲ್ ಮೀಟ್ ಜಾಯನಿಂಗ್ ಇನ್ಫೋ ವಿಡಿಯೋ ಕಾಲ್ ಲಿಂಕ್: https://meet.google.com/ipv-nesk-hur

## ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಆ. 24- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲು ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಸ್ಟೇಡಿಯಂ, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ಮುಸ್ಲಿಂ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ : ಕ್ರಮಕ್ಕೆ ಆಗ್ರಹ



ಹರಿಹರ, ಆ. 26- ನಗರದ ಅಂಜುಮಾನ್ ಇಸ್ಲಾಮಿಯಾ ಸಂಸ್ಥೆ ವತಿಯಿಂದ ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳನ್ನು ತೇಜೋವಧೆ ಮತ್ತು ಪ್ರವಾದಿ ಮಹಮ್ಮದ್ ಪೈಗಂಬರ್ ರವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ, ಸಮಾಜದ ಶಾಂತಿ ವಾತಾವರಣ ಕದಡುತ್ತಿರುವ ರಾಮಗಿರಿ ಮಹಾರಾಜ್ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಿ ಗ್ರೇಡ್ 2 ತಹಶೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು.

ಈ ವೇಳೆ ಮುಸ್ಲಿಂ ಸಮುದಾಯದ ಮುಖಂಡರು ಮಾತನಾಡಿ, ಮಹಾರಾಷ್ಟ್ರ ರಾಜ್ಯದ ನಾಸಿಕ್ ಜಿಲ್ಲೆಯಲ್ಲಿ ಈಚೆಗೆ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ರಾಮಗಿರಿ ಮಹಾರಾಜ್ ಅವರು ಪ್ರವಾದಿಗಳ ಹಾಗೂ ತಾಯಿಯವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಅವಮಾನಿಸಿದ್ದಾರೆ. ಇದು ದೇಶದ ಮುಸ್ಲಿಂ ಸಮುದಾಯದ ಹೃದಯವನ್ನು ಘಾಸಿಗೊಳಿಸಿದೆ ಎಂದು ಹೇಳಿದರು.

ಮತ್ತೊಂದು ಮನವಿಯನ್ನು ಅರ್ಪಿಸಿ ಮಾತನಾಡಿದ ಮುಖಂಡರು, ಈಚೆಗೆ ಕೊಲ್ಕತ್ತಾದಲ್ಲಿನ ಆರ್.ಜಿ. ಕರ್. ಮೆಡಿಕಲ್ ಕಾಲೇಜು ಮತ್ತು ಹಾಸ್ಪಿಟಲ್‌ನ ವೈದ್ಯೆ ಯೋರ್ವರ ಮೇಲೆ ಅತ್ಯಾಚಾರ ಹಾಗೂ ಕೊಲೆ ನಡೆದಿದ್ದು, ಸರ್ಕಾರ ಆರೋಪಿಗಳನ್ನು ಪತ್ತೆ ಮಾಡಿ ಕಾನೂನಿನ ಪ್ರಕಾರ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಂಜುಮಾನ್ ಇಸ್ಲಾಮಿಯಾ ಸಂಸ್ಥೆ ಅಧ್ಯಕ್ಷ ಏಜೆಂಟ್ ಆಹ್ಮದ್, ಕಾರ್ಯದರ್ಶಿ ಸೈಯದ್ ಆಸೀಫ್ ಜುನೇದಿ, ಫೈಯಾಜ್ ಆಹ್ಮದ್, ನಗರಸಭೆ ಸದಸ್ಯರಾದ ಆರ್.ಸಿ. ಜಾವೇದ್, ಮುಜಾಮಿಲ್ ಬಿಲ್ಲು, ಮುಖಂಡರಾದ ಸನಾವುಲಾ ಸಾಬ್, ಹಾಜಿ ಹಾಲಿ, ಸಾಧಿಕ್, ನೂರುಲ್ಲಾ, ಯಾಸೀನ್ ಸಖಾಫಿ, ಷರೀಫ್ ಸಖಾಫಿ, ನೂರುಲ್ಲಾ, ಮನಸೂರು ಮದ್ದಿ, ಜಾಕೀರ್, ಮಹಬೂಬ್ ಎಸ್.ಎಸ್.ಕೆ, ಅತಾವುಲ್ಲಾ, ಅಫ್ರೋಜ್, ಮುಕ್ತಿಯಾರ್, ಸೈಯದ್ ದರ್ವೇಶ್, ರೋಷನ್ ಇಕ್ಬಾಲ್ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಪ್ರೇಮಾ ರಾಜನಹಳ್ಳಿ ರಮಾನಂದ್ ಕಲ್ಯಾಣ ಮಂಟಪದ ಉದ್ಘಾಟನೆ

ಶ್ರೀ ವಾಸವಿ ಸೇವಾ ಸಂಘದಿಂದ ಡಿ.ಸಿ.ಎಂ. ಟೌನ್‌ಷಿಪ್ ನಲ್ಲಿರುವ ವಾಸವಿ ದೇವಿ ದೇವಸ್ಥಾನದಲ್ಲಿ ಶ್ರೀಮತಿ ಪ್ರೇಮಾ ರಾಜನಹಳ್ಳಿ ಶ್ರೀ ರಮಾನಂದ್ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಇಂದಿನಿಂದ ಮೂರು ದಿನ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 6.30 ರಿಂದ ವಿವಿಧ ಪೂಜೆಗಳು ಜರುಗಲಿವೆ. ನಂತರ ಬೆಳಿಗ್ಗೆ 11.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವ ಆರ್ಯವೈಶ್ಯ ಕುಲ ಗುರುಗಳಾದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಸಂಘದ ಗೌರವಾಧ್ಯಕ್ಷ ಡಾ|| ಬಿ.ಎಸ್. ನಾಗಪ್ರಕಾಶ್ ವಹಿಸಲಿದ್ದು, ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ರಾಜನಹಳ್ಳಿ ರಮಾನಂದ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ವಿಪ ಸದಸ್ಯ ಡಿ.ಎಸ್. ಅರುಣ್, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನ ಅಧ್ಯಕ್ಷ ಚನ್ನಗಿರಿ ವಿರೂಪಾಕ್ಷಪ್ಪ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ವಿಪ ಸದಸ್ಯ ಟಿ.ಎ. ಶರವಣ, ವಿಶ್ರಾಂತ ಅಪರ ನಿರ್ದೇಶಕ ಡಾ|| ಜೆ.ವಿ. ನಂದನ್‌ಕುಮಾರ್, ವಿಶೇಷ ಆಹ್ವಾನಿತರಾಗಿ ಕಟ್ಟಡದ ತಾಂತ್ರಿಕ ನಿರ್ದೇಶಕ ಕೆ.ಎಲ್. ರವೀಂದ್ರನಾಥ ಶ್ರೇಷ್ಠಿ, ಹೆಚ್.ಆರ್. ಕಾಶಿ ವಿಶ್ವನಾಥ್ ಶ್ರೇಷ್ಠಿ, ವರ್ತಕ ಎಲ್.ಜೆ. ರಾಧಾಕೃಷ್ಣ ಶ್ರೇಷ್ಠಿ ಉಪಸ್ಥಿತರಿರುವರು. ಶ್ರೀ ವಾಸವಿ ಸೇವಾ ಸಂಘದ ಅಧ್ಯಕ್ಷ ಕೆ.ಎಸ್. ರುದ್ರ ಶ್ರೇಷ್ಠಿ ಗೌರವ ಉಪಸ್ಥಿತಿ ಇರುವರು.

ಸಂಜೆ 5.30 ರಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದು, ಶ್ರೀ ಕಲಾಂಜಲಿ ಕಲಾ ಟ್ರಸ್ಟ್ ಬಳ್ಳಾರಿ ಇವರಿಂದ ಶ್ರೀ ಶ್ರೀನಿವಾಸ ಕಲ್ಯಾಣ ನಾಟಕ ಪ್ರದರ್ಶನಗೊಳ್ಳಲಿದೆ.

## ಜಗಳೂರಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಶಾಸಕರ ಸಮ್ಮತಿ

ಜಗಳೂರು, ಆ.26- ಕನ್ನಡ ನಾಡು, ನುಡಿ ಕಟ್ಟಲು ಜಾತಿ, ಧರ್ಮ ಭೇದ ಭಾವಗಳು ರಾಜಕೀಯ ಬಿನ್ನಾಭಿಪ್ರಯಗಳನ್ನು ಬದಿಗೊತ್ತಿ ಎಲ್ಲರೂ ಒಂದಾಗಿ 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸೋಣ ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು

ಪಟ್ಟಣದ ಪ್ರವಾಸಿ ಮಂದಿರ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಕುರಿತು ನಡೆದ ಅನೌಪಚಾರಿಕ ಸಭೆಯಲ್ಲಿ ಮಾತನಾಡಿದರು.

ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಸಹ ನಮ್ಮ ನಾಡು, ನುಡಿ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಬಿಡಬಾರದು. ಗ್ರಾಮೀಣ ಭಾಗದಿಂದ ಬಂದಂತಹ ನಾವುಗಳೇ ಕನ್ನಡ ಕಟ್ಟುವ ಮತ್ತು ಸಾಹಿತ್ಯ ಬೆಳೆಸುವ ಕಾರ್ಯವನ್ನು ಪೋಷಿಸುವ ಮೂಲಕ ಭವಿಷ್ಯದ ಜನಾಂಗಕ್ಕೆ ಉಳಿಸುವ ಕಾರ್ಯ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಇಂಗಿತ ವ್ಯಕ್ತಪಡಿಸಿದ ಜಿಲ್ಲಾ ಘಟಕಕ್ಕೆ ತನು ಮನ ಧನ ಸಹಾಯ ನೀಡಿ ಅದ್ದೂರಿ ಜಿಲ್ಲಾ ಸಮ್ಮೇಳನ ನೆಡೆಸಲು ಸಹಕಾರ ನೀಡುತ್ತೇನೆ ಎಂದರು.



ಜಿಲ್ಲಾ ಕಸಾಪ ಅಧ್ಯಕ್ಷ ವಾಮದೇವಪ್ಪ ಮಾತನಾಡಿ, ಜಗಳೂರು ಬರದ ತಾಲ್ಲೂಕು ಆದರೂ ಐತಿಹಾಸಿಕ ಹಿನ್ನೆಲೆಯಿದೆ. ಕಲೆ, ಸಾಹಿತ್ಯ, ಸಂಗೀತ, ರಂಗಭೂಮಿ ಕ್ಷೇತ್ರದಲ್ಲಿ ತನ್ನದೇ ಸಾಧನೆ ಮಾಡಿದ ಶಿಕ್ಷಣ ಮತ್ತು ಅಭಿವೃದ್ಧಿ ವಿಚಾರದಲ್ಲಿ ಸ್ವತಹ ಸಾಹಿತ್ಯ ಆಸಕ್ತಿಯನ್ನು ಮೈಗೂಡಿಸಿಕೊಂಡಿರುವ ಶಾಸಕರು ಕ್ಷೇತ್ರ ಪ್ರತಿನಿಧಿಸಿರುವುದು ನಮ್ಮೆಲ್ಲರ ಭಾಗ್ಯ. ಅವರ ನೇತೃತ್ವದಲ್ಲಿ ಅದ್ದೂರಿ ಜಿಲ್ಲಾ ಮಟ್ಟದ ಸಮ್ಮೇಳನ ಮಾಡಲು ಎಲ್ಲರ ಸಹಕಾರ ಮುಖ್ಯ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಬಿ.ದಳ್ಳಪ್ಪ , ರೇವಣಸಿದ್ದಪ್ಪ, ಹಿರಿಯ ಸಾಹಿತಿ ಎನ್ ಟಿ.ಎರ್ರಿಸ್ವಾಮಿ, ಪತ್ರಕರ್ತ ಜಿಗಳಿ ಪ್ರಕಾಶ್, ಜಗಳೂರು ಕಸಾಪ ಅಧ್ಯಕ್ಷೆ ಸುಜಾತಮ್ಮ, ದಾವಣಗೆರೆ ಕ.ಸಾ.ಪ ಅಧ್ಯಕ್ಷೆ ಸುಮತಿ ,ನಿವೃತ್ತ ಸಮಾಜ ಕಲ್ಯಾಣ ಅಧಿಕಾರಿ ಬಿ.ಮಹೇಶ್ವರಪ್ಪ , ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಎನ್.ಎಸ್.ರಾಜು , ಷಡಕ್ಷರಪ್ಪ , ಕಾರ್ಯದರ್ಶಿ ಜಗದೀಶ್ ಕೂಲಂಬಿ , ಎಂ.ರಾಜಪ್ಪ, ಪರಿಮಳ ಜಗದೀಶ್ , ಸಾಹಿತಿ ಗೀತಾ ಮಂಜು, ಡಿ.ಸಿ. ಮಲ್ಲಿಕಾರ್ಜುನಪ್ಪ , ಪಲ್ಲಾಗಟ್ಟೆ ಶೇಖರಪ್ಪ, ಹಿರಿಯ ಪತ್ರಕರ್ತರ ಬಿ.ಪಿ.ಸುಭಾನ್, ಪ್ರಾಂಶುಪಾಲರು ನಾಗಲಿಂಗಪ್ಪ , ಗ್ಯಾಸ್ ಓಬಣ್ಣ , ಧನ್ಯಕುಮಾರ್ ಇದ್ದರು.

## ದೂಡಾ ಸದಸ್ಯರಾಗಿ ಜಾಕೀರ್ ಅಲಿ



ದಾವಣಗೆರೆ, ಆ.26- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಮಹಾನಗರ ಪಾಲಿಕೆ ಸದಸ್ಯ ಜಾಕೀರ್ ಅಲಿ ನೇಮಕಗೊಂಡಿದ್ದಾರೆ.

## ರಾಣೇಬೆನ್ನೂರು : ಇಂದು ವಿದ್ಯುತ್ ಇಲ್ಲ

ಮೆಡ್ಲೇರಿ, ಹಿರೇಬಿದರಿ, ಕೋಣನ ತಂಬಗಿ, ಅರೇಮಲ್ಲಾಪುರ, ಸೋಮಲಾಪುರ, ಐರಣಿ, ರಾಹುತನಕಟ್ಟಿ, ಯಕ್ಲಾಸಪುರ, ಕರೂರು, ಚಳಗೇರಿ, ಖಂಡೇರಾಯನಹಳ್ಳಿ, ವಡೇರಾಯನ ಹಳ್ಳಿ, ಹುಲಿಕಟ್ಟಿ, ನದಿಹರಳಹಳ್ಳಿ, ಎಣ್ಣಿಹೊಸಳ್ಳಿ, ಹುಣಸಿಕಟ್ಟಿ, ದೇವನಗೊಂಡನಕಟ್ಟಿ, ಮಾಗೋಡ, ಕಮದೋಡ ಹಾಗೂ ಮುದೇನೂರು ವಾಟರ್ ಸಪ್ಲೈ, ವೆಂಕಟೇಶ್ವರ ಹ್ಯಾಚರಿ, ರಾಮ್ಕೋ ಫ್ಯಾಕ್ಟರಿ ಸೇರಿದಂತೆ ಹಲವೆಡೆ ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ವರದಿಗಾರರ ಕೂಟದ ವಾರ್ಷಿಕ ಮಾಧ್ಯಮ ಪ್ರಶಸ್ತಿಗೆ ಆಯ್ಕೆ



ದಾವಣಗೆರೆ, ಆ. 26 - ಜಿಲ್ಲಾ ವರದಿಗಾರರ ಕೂಟದಿಂದ ಕೊಡಮಾಡುವ ವಾರ್ಷಿಕ ಮಾಧ್ಯಮ ಪ್ರಶಸ್ತಿಗೆ ಪ್ರಸಕ್ತ ಸಾಲಿನಲ್ಲಿ ಮಾಧ್ಯಮ ರಂಗದಲ್ಲಿ ಸೇವೆ ಸಲ್ಲಿಸಿದ 8 ಜನ ಪತ್ರಕರ್ತರು ಭಾಜನರಾಗಿದ್ದಾರೆ.

ಗಣೇಶ ಕಮಲಾಪುರ (ವಿಜಯವಾಣಿ), ವಿನಾಯಕ ನಾಯ್ಕ ಪೂಜಾರಿ (ವಿಜಯ ಕರ್ನಾಟಕ), ದೇವಿಕಾ ಸುನೀಲ್ (ಕನ್ನಡ ಭಾರತಿ), ಕೆ.ಆರ್. ಪುನೀತ್ ಆಪ್ತಿ (ಪಬ್ಲಿಕ್ ಟಿವಿ), ಬಿ. ಹನುಮಂತರಾವ್ (ಒನ್ ಕನ್ನಡ), ಹೆಚ್. ನಿಂಗರಾಜ್ (ದಾವಣಗೆರೆ ಶಿವ), ಚನ್ನಬಸವ ಶೀಲವಂತ (ಕನ್ನಡಪ್ರಭ), ಎ.ಬಿ. ರುದ್ರಮ್ಮ(ಕ್ರಾಂತಿ ಕೇಸರಿ) ಅವರುಗಳನ್ನು 'ಮಾಧ್ಯಮ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ದಾವಣಗೆರೆ ಪತ್ರಿಕೋದ್ಯಮದಲ್ಲಿ ದಶಕಗಳ ಕಾಲ ಕಾರ್ಯ ನಿರ್ವಹಿಸಿ ಸೇವೆ ಸಲ್ಲಿಸಿದ ಎಂಟು ಜನ ಹಿರಿಯ ಪತ್ರಕರ್ತರಿಗೂ ಈ ಬಾರಿ ಜೀವಮಾನ ಸಾಧನೆಗಾಗಿ ಗೌರವ ಸನ್ಮಾನ ನಡೆಯಲಿದೆ.

ವೀರಪ್ಪ ಎಂ. ಬಾವಿ (ಇಂದಿನ ಸುದ್ದಿ), ಎನ್. ಆರ್. ನಟರಾಜ್ (ಉದಯವಾಣಿ), ಜಿ.ಎಂ.ಆರ್. ಆರಾಧ್ಯ (ಜನಮಿಡಿತ), ಎಂ. ಶಶಿಕುಮಾರ್ (ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್), ಎಸ್.ಎ. ಗಂಗರಾಜು (ಟೈಮ್ಸ್ ಆಫ್ ಇಂಡಿಯಾ), ಐ. ಗುರುಶಾಂತಪ್ಪ (ಮಲ್ನಾಡವಾಣಿ), ಬಸವರಾಜ್ ಐರಣಿ (ಮಲ್ನಾಡವಾಣಿ), ಬಕ್ಕೇಶ್ ನಾಗನೂರು (ಹಿರಿಯ ಪತ್ರಕರ್ತ) ಅವರುಗಳು ಗೌರವ ಸನ್ಮಾನಕ್ಕೆ ಭಾಜನರಾಗಿದ್ದಾರೆ.

ಪ್ರಶಸ್ತಿ, ಸನ್ಮಾನಕ್ಕೆ ಆಯ್ಕೆಯಾದ ಇವರೆಲ್ಲರಿಗೂ ವರದಿಗಾರರ ಕೂಟದಿಂದ ಇದೇ ದಿನಾಂಕ 31ರಂದು ಬೆಳಿಗ್ಗೆ 11ಕ್ಕೆ ನಡೆಯುವ ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಗುವುದು ಎಂದು ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್, ಪ್ರಧಾನ ಕಾರ್ಯದರ್ಶಿ ಎಂ.ವೈ. ಸತೀಶ್, ಖಜಾಂಚಿ ಪವನ್ ಐರಣಿ, ಪಿಆರ್ ಓ ಪಿ.ಎಸ್. ಲೋಕೇಶ ತಿಳಿಸಿದ್ದಾರೆ.

## ಜೈನ್ ವಿದ್ಯಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಆ.26- ಶ್ಯಾಮನೂರು ಬಳಿಯಿರುವ ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಪುಟಾಣಿ ಮಕ್ಕಳು ಕೃಷ್ಣ ರಾಧೆಯರ ವೇಷ ಧರಿಸಿ, ಮೊಸರಿನ ಮಡಿಕೆ ಒಡೆಯುವ ಆಟದಲ್ಲಿ ಸಂಭ್ರಮದಿಂದ ಭಾಗವಹಿಸಿ ಖುಷಿಪಟ್ಟರು. ರಂಗು-ರಂಗಿನ ವೇಷದಲ್ಲಿ ನಲಿದಾಡುತ್ತಿದ್ದ ಮಕ್ಕಳನ್ನು ನೋಡಿ ಪೋಷಕರು ಮತ್ತು ಶಿಕ್ಷಕ - ಶಿಕ್ಷಕಿಯರ ಮುಖದಲ್ಲಿ ಮಂದಹಾಸ ಮೂಡಿತ್ತು.

## ಮಲೇಬೆನ್ನೂರಿನಲ್ಲಿ ಕೃಷ್ಣ ಜನ್ಮಾಷ್ಟಮಿ



ಮಲೇಬೆನ್ನೂರು, ಆ. 26 - ಇಲ್ಲಿನ ಇಂದಿರಾ ನಗರದಲ್ಲಿರುವ ಗಣೇಶ ದೇವಸ್ಥಾನದಲ್ಲಿ ಯಾದವ ಸಮಾಜದ ಬಂಧುಗಳು ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಿದರು. ಶ್ರೀ ಕೃಷ್ಣನಿಗೆ ವಿಶೇಷ ಪೂಜೆ ಅಭಿಷೇಕ ಸಲ್ಲಿಸಿ ನಂತರ ಎಲ್ಲರಿಗೂ ಪ್ರಸಾದ ವಿತರಣೆ ಮಾಡಿದರು. ಕೃಷ್ಣ ವೇಷಧಾರಿಗಳಾಗಿ ದೇವಸ್ಥಾನಕ್ಕೆ ಆಗಮಿಸಿದ್ದ ಮಕ್ಕಳಿಗೆ ಬಹುಮಾನ ನೀಡಲಾಯಿತು.


## ಕಾಣೆಯಾಗಿದ್ದಾರೆ



ದಾವಣಗೆರೆ ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ವಾಸಿಯಾದ ರಾಮಮೂರ್ತಿ ಕೆ. ಎಲ್. ಇವರು ದಿ.:17.08.2024ರಂದು ಮನೆಯಿಂದ ಹೋದವರು ಇದುವರೆಗೂ ಬಂದಿರುವುದಿಲ್ಲ. ಇವರಿಗೆ 40 ವರ್ಷ ವಯಸ್ಸು, ಬ್ರಾಹ್ಮಣ ಜನಾಂಗ, ಸಾಧಾರಣ ಮೈಕಟ್ಟು, ಅಗಲ ಮುಖ, ಗೋದಿ ಮೈ ಬಣ್ಣ, 5.3 ಅಡಿ ಎತ್ತರ, ಕನ್ನಡ ಭಾಷೆ ಬಲ್ಲವರಾಗಿದ್ದು, ಕೆಂಪುಬಿಳಿ ಗೆರೆಯ ಶರ್ಟ್, ಸಿಮೆಂಟ್ ಕಲರ್ ಫ್ಯಾಂಟ್ ಧರಿಸಿದ್ದಾರೆ. ಇವರ ಸುಳಿವು ಯಾರಿಗಾದರೂ ತಿಳಿದಲ್ಲಿ ಈ ಕೆಳಕಂಡ ಫೋನ್‌ಗೆ ಅಥವಾ ಹತ್ತಿರದ ಪೊಲೀಸ್ ಠಾಣೆಗಾಗಲೀ ಸಂಪರ್ಕಿಸಲು ಕೋರಿದೆ.

**ಫೋ. : 93530 20050**

## ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಕೃಷ್ಣ-ರಾಧೆಯರಂತೆ ಮುದ್ದು ಪುಟಾಣಿಗಳು.....



ಅರ್ನವ್ ಪಾಟೀಲ್
ತಂದೆ : ವೀರೇಂದ್ರ ಪಾಟೀಲ್
ತಾಯಿ : ಶ್ರೀಮತಿ ಸುಷ್ಮಾ



ಶೌರ್ಯ ಪಿ. ದೇವರಮನೆ
ತಂದೆ : ಹೆಚ್. ಪ್ರವೀಣ್‌ಕುಮಾರ್
ತಾಯಿ : ಶ್ರೀಮತಿ ಎಸ್. ಜ್ಯೋತಿ



ಗ್ರಿತಿಕ್ ಎಸ್.ಹೆಚ್.
ತಂದೆ : ಸುರೇಶ್ ಹೆಚ್.ಸಿ.
ತಾಯಿ : ಶ್ರೀಮತಿ ನೇತ್ರಾವತಿ ಕೆ.




ವೇದಿಕ್ ಎಂ.
ತಂದೆ : ಮಂಜುನಾಥ್ ಕೆ.
ತಾಯಿ : ಶ್ರೀಮತಿ ಗಂಗಾ




ಧನ್ವೀರ್ ಜಿ.
ತಂದೆ : ಗುರು
ತಾಯಿ : ಶ್ರೀಮತಿ ತೇಜಸ್ವಿನಿ



ಕುಶಾಲ್
ತಂದೆ : ಸಿದ್ದೇಶ್
ತಾಯಿ : ಶ್ರೀಮತಿ ಪಲ್ಲವಿ



ಖುಷಿ
ತಂದೆ : ಸಿದ್ದೇಶ್
ತಾಯಿ : ಶ್ರೀಮತಿ ಪಲ್ಲವಿ



ಜನನಿ ಸಿ.
ತಂದೆ : ಚಂದ್ರು ಕೆ.
ತಾಯಿ : ಶ್ರೀಮತಿ ರಂಜಿತ ಪಿ.



ಸಿರಿ ಸಿ.ಟಿ.
ತಂದೆ : ಚಂದ್ರಶೇಖರ್ ಟಿ.ಎಂ.
ತಾಯಿ : ಶ್ರೀಮತಿ ಮಧು



ಮಾನ್ವಿತಾ.ಆರ್
ತಂದೆ : ರಾಕೇಶ್. ಜಿ.

## ರಾಣೇಬೆನ್ನೂರು ತಾ।। ಕಸಾಪ ಭವನ ನಿರ್ಮಾಣ ರಾಜ್ಯದಲ್ಲೇ ಪ್ರಥಮ



ರಾಣೇಬೆನ್ನೂರು, ಆ.27- ರಾಜ್ಯದಲ್ಲೇ ಪ್ರಥಮ ಬಾರಿಗೆ ತಾಲ್ಲೂಕು ಕೇಂದ್ರದಲ್ಲಿ ಸಾಹಿತ್ಯ ಭವನ ನಿರ್ಮಿಸಿದ ಕೀರ್ತಿ ತಾಲ್ಲೂಕಿನ ಸಾಹಿತ್ಯಾಸಕ್ತರಿಗೆ ಸಲ್ಲುತ್ತದೆ ಎಂದು 'ವರ್ತಕ ರತ್ನ ಪ್ರಶಸ್ತಿ ಪುರಸ್ಕೃತ' ಉದ್ಯಮಿ ಮಲ್ಲೇಶ್ ಹೇಳಿದರು.

ನಗರದ ಮೆಡ್ಲೇರಿ ರಸ್ತೆಯ ಸಾಹಿತ್ಯ ಭವನದಲ್ಲಿ ಸೋಮವಾರ ನಡೆದ ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಭವನ ನಿರ್ಮಾಣಕ್ಕಾಗಿ ಎಲ್ಲರೊಡಗೂಡಿ ಶ್ರಮಿಸಿದ ಅಂದಿನ ಅಧ್ಯಕ್ಷ ಹಾಗೂ ಉದ್ಯಮಿ ವಾಸಣ್ಣ ಕುಸಗೂರ ಅವರ ಪರಿಶ್ರಮ ಅಪಾರ ಎಂದು ಶ್ಲಾಘಿಸಿದರು.

ನಗರವು ವಾಣಿಜ್ಯೋದ್ಯಮದಲ್ಲಿ ಬೆಳವಣಿಗೆ ಕಂಡಂತೆ ಸಾಹಿತಿಗಳ ಬೆಳೆವಣಿಗೆಗೂ ಸಹಕಾರ ನೀಡುತ್ತಾ ಬಂದಿದೆ. ಹಾಗಾಗಿ ನಗರದಲ್ಲಿ ಈ ವರೆಗೂ ನಡೆದ ಸಮ್ಮೇಳನಗಳು, ಸಾಹಿತ್ಯ ಕಾರ್ಯಕ್ರಮಗಳು ಯಶಸ್ಸು ಕಂಡಿವೆ. ಈ ಯಶಸ್ಸಿಗೆ ತಾಲ್ಲೂಕಿನ ಎಲ್ಲ ಪ್ರತಿನಿಧಿಗಳ ಸಹಕಾರ ಸಹ ದೊರಕಿದೆ ಎಂದು ಅರಕೇರಿ ಹೇಳಿದರು.

ನಿಕಟಪೂರ್ವ ಅಧ್ಯಕ್ಷ ವೀರೇಶ್ ಜಂಬಗಿ ಅವರಿಂದ ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಪ್ರಭಾಕರ ಶಿಗ್ಲಿ ಮಾತನಾಡಿ, ಎಲ್ಲರ ಸಹಕಾರದಿಂದ ಹೆಚ್ಚೆಚ್ಚು ಸಾಹಿತ್ಯ ಕಾರ್ಯಕ್ರಮ ಆಯೋಜಿಸುವುದಾಗಿ ಹೇಳಿದರು.

ನಗರಸಭೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ, ಪ್ರಭಾವತಿ ತಿಳವಳ್ಳಿ, ವರ್ತಕರ ಸಂಘದ ಅಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ಜಿಲ್ಲಾಧ್ಯಕ್ಷ ಲಿಂಗಯ್ಯ ಮತ್ತಿತರರು ಮಾತನಾಡಿದರು. ನಿವೃತ್ತ ಮುಖ್ಯ ಶಿಕ್ಷಕಿ ಮೈಲಾರ ಸಾವಿತ್ರಿ ಆಶಯ ನುಡಿಗಳನ್ನಾಡಿದರು.

ವರ್ತಕ ಸಂಘದ ಮಾಜಿ ಅಧ್ಯಕ್ಷ ರಾಜಣ್ಣ ಮೋಟಗಿ, ಧಾರವಾಡ ವಿವಿ ಸದಸ್ಯ ನಾಮದೇವ ಚಿಕ್ಕಣ್ಣನವರ, ಮಾಜಿ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳಿದ್ದರು.

## ಎಕ್ಕೆಗೊಂದಿಯಲ್ಲಿ ನಡೆದ ಭಾನುವಳ್ಳಿ ಬಸವಣ್ಣನ ಕಾರಣಿಕ



ಮಲೇಬೆನ್ನೂರು, ಆ.26- ಶ್ರಾವಣ ಮಾಸದ ಕಡೇ ಸೋಮವಾರದ ಅಂಗವಾಗಿ ಎಕ್ಕೆಗೊಂದಿಯಲ್ಲಿ ಸೋಮವಾರ ರಾತ್ರಿ ಎಕ್ಕೆಗೊಂದಿಯಲ್ಲಿ ಜರುಗಿದ ಭಾನುವಳ್ಳಿಯ ಬಸವೇಶ್ವರ ದೇವರ ಕಾರಣಿಕಕ್ಕೆ ಅಪಾರ ಭಕ್ತರು ಸಾಕ್ಷಿಯಾದರು.

'ಒಂದು ಮುತ್ತಿಗೆ ಹದಿಮೂರು ಆದೀತಲೇ' ಎಂದು ಪೂಜಾರಪ್ಪ ಕಾರಣಿಕ ನುಡಿದರು.

## ಮಲ್ಲನಾಯ್ಕನಹಳ್ಳಿ ಬಸವಣ್ಣನ ಕಾರಣಿಕ



ಮಲೇಬೆನ್ನೂರು, ಆ.26- ಶ್ರಾವಣ ಮಾಸದ ಕಡೇ ಸೋಮವಾರ ಅಂಗವಾಗಿ ಸಂಕ್ಲೀಪುರದ ಶ್ರೀ ರೇವಣಸಿದ್ದೇಶ್ವರ ಸನ್ನಿಧಿಯಲ್ಲಿ ಮಲ್ಲನಾಯ್ಕನಹಳ್ಳಿಯಲ್ಲಿ ಶ್ರೀ ಬಸವೇಶ್ವರ ದೇವರ ಕಾರಣಿಕ ಸೋಮವಾರ ಸಂಜೆ ಸಂಭ್ರಮದಿಂದ ಜರುಗಿತು.

'ಗಂಗವ್ವನ ಪಾದಕ್ಕೆ ಮುತ್ತಿನ ಗಿಣಿ ಕುಕ್ಕೀತು, ಅನ್ನ ನೀರು ಸಂತೃಪ್ತಿ' ಎಂದು ಪೂಜಾರಪ್ಪ ಕಾರಣಿಕ ನುಡಿದರು.

## ನಗರದಲ್ಲಿ ಇಂದು ಜಯದೇವ ಶ್ರೀಗಳ ಕಂಚಿನ ಪ್ರತಿಮೆಗೆ ಪುಷ್ಪ ನಮನ



ಮುರಘಾಮಠದ ಅದ್ವಿತೀಯ ಚೈತನ್ಯ ಶ್ರೀ ಜಯದೇವ ಜಗದ್ಗುರುಗಳವರ 150ನೇ ಜನ್ಮದಿನದ ಅಂಗವಾಗಿ, ಜಯ ದೇವ ಸರ್ಕಲ್‌ನಲ್ಲಿರುವ ಜಗದ್ಗುರುಗಳ ಕಂಚಿನ ಪ್ರತಿಮೆಗೆ ಶಿವಶಿಂಪಿ ಸಮಾಜ ಪ್ರಸಾದ ನಿಲಯದ ಹಳೆಯ ವಿದ್ಯಾರ್ಥಿ ಗಳು, ಸರ್ವ ಜನಾಂಗದವರಿಂದ ಪುಷ್ಪ ನಮನ ಕಾರ್ಯಕ್ರಮ ವನ್ನು ಇಂದು ಬೆಳಿಗ್ಗೆ 8-30 ಕ್ಕೆ ಏರ್ಪಡಿಸಲಾಗಿದೆ. ಸಮಾಜದ ಅಧ್ಯಕ್ಷ ಚಿಂದೋಡಿ ಚಂದ್ರಧರ್ ಮಾಲಾರ್ಪಣೆ ಮಾಡುವರು.

## ಇಂದು ಜಯದೇವ ಜಗದ್ಗುರುಗಳ ಜಯಂತಿ

ಶ್ರೀ ಜಯದೇವ ಜಗದ್ಗುರುಗಳ 150ನೇ ಜಯಂತ್ಯೋತ್ಸವವನ್ನು ನಗರದ ಶಿವಯೋಗಾಶ್ರಮದಲ್ಲಿರುವ ಶ್ರೀ ಜಗದ್ಗುರುಗಳವರ ಗದ್ದುಗೆಯ ಮುಂದೆ ಆಚರಿಸಲಾಗುವುದು ಎಂದು ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

## ಭಾವಚಿತ್ರದ ಮತದಾರರ ಪಟ್ಟಿ ಪರಿಷ್ಕರಣೆ

ದಾವಣಗೆರೆ, ಆ.27- ಚುನಾವಣಾ ಆಯೋಗದ ನಿರ್ದೇಶನದನ್ವಯ ಭಾವಚಿತ್ರವಿರುವ ಮತದಾರರ ಪಟ್ಟಿಯ ಸಂಕ್ಷಿಪ್ತ ವಿಶೇಷ ಪರಿಷ್ಕರಣೆಗೆ ಅವಕಾಶ ಕಲ್ಪಿಸಿದ್ದು 2025 ರ ಜನವರಿ 1 ಕ್ಕೆ 18 ವರ್ಷ ತುಂಬುವವರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ವೋಟರ್ ಹೆಲ್ಪ್ ಲೈನ್ ಆಪ್ ಅಥವಾ http;// voters.eci.gov.in/ ವೆಬ್‌ಸೈಟ್ ಮೂಲಕವೂ ನೋಂದಣಿ, ತಿದ್ದುಪಡಿ, ವರ್ಗಾವಣೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಇದೆ. ಸಂಪರ್ಕಿಸಬೇಕಾದ ತಹಶೀಲ್ದಾರರ ದೂರವಾಣಿ; ಜಗಳೂರು 9164687171, ದಾವಣಗೆರೆ 9108268759, ಹರಿಹರ 98809 94147, ಪಾಲಿಕೆ ಕಂದಾಯಾಧಿಕಾರಿ 990176 8584, ಪರಿಷತ್ ಕಾರ್ಯದರ್ಶಿ 7892012952, ಚನ್ನಗಿರಿ 9880383519, ಹೊನ್ನಾಳಿ 948054 5472 ಮೊಬೈಲ್‌ಗೆ ಕರೆ ಮಾಡಬಹುದಾಗಿದೆ.

ಮತದಾರರ ಪಟ್ಟಿಯ ಕರಡು ಪ್ರತಿಯನ್ನು 2024 ರ ಅಕ್ಟೋಬರ್ 29 ರಂದು ಪ್ರಕಟಿಸಲಾಗುತ್ತದೆ. ಆಕ್ಷೇಪಣೆಗಳಿದ್ದಲ್ಲಿ 2024 ರ ನವೆಂಬರ್ 28 ರೊಳಗಾಗಿ ಸಲ್ಲಿಸಬಹುದಾಗಿದೆ. 2025 ರ ಜನವರಿ 6 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

## ಕಡಿಮೆ ವೆಚ್ಚದಲ್ಲಿ ಕ್ಷಯ ಪತ್ತೆ ರೂಪಿಸಿದ ಐಸಿಎಂಆರ್

ನವದೆಹಲಿ, ಆ. 26 - ರೋಗಿಯ ಕಫ ಪರೀಕ್ಷಿಸಿ ಕ್ಷಯ ರೋಗ ಪತ್ತೆ ಮಾಡುವ ಕಡಿಮೆ ವೆಚ್ಚದ ಪರೀಕ್ಷಾ ವಿಧಾನವನ್ನು ಐ.ಸಿ.ಎಂ.ಆರ್. ಪ್ರಾಂತೀಯ ಕೇಂದ್ರ ರೂಪಿಸಿದೆ.

ಅಸ್ಸಾಂನ ದಿಬ್ರುಘರ್ ನಲ್ಲಿರುವ ಪ್ರಾಂತೀಯ ಕೇಂದ್ರವು, ಕೇವಲ 35 ರೂ.ಗಳ ವೆಚ್ಚದ ಈ ಪರೀಕ್ಷಾ ವಿಧಾನವನ್ನು ರೂಪಿಸಿದೆ. ಎ - ಸಿ.ಆರ್.ಐ.ಸಿ.ಪಿ.ಆರ್. ವಿಧಾನದ ಮೂಲಕ ಕ್ಷಯ ರೋಗವನ್ನು ಪತ್ತೆ ಮಾಡಲಾಗುವುದು. ಎರಡುವರೆ ಗಂಟೆಗಳ ಒಂದು ಸುತ್ತಿನಲ್ಲಿ 1500ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷೆ ಮಾಡಲು ಸಾಧ್ಯವಿದೆ ಎಂದು ಐಸಿಎಂಆರ್ ಮೂಲಗಳು ತಿಳಿಸಿವೆ.



## ಇಸ್ಕಾನ್ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ

ದಾವಣಗೆರೆ, ಆ. 26- ಅಂತರ್ ರಾಷ್ಟ್ರೀಯ ಕೃಷ್ಣ ಭಾವನಾಮೃತ ಸಂಘ (ಇಸ್ಕಾನ್) ದಾವಣಗೆರೆ ಘಟಕದ ವತಿಯಿಂದ ಇಲ್ಲಿನ ವಿನೋಬನಗರದ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಸೋಮವಾರ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಸಂಜೆ 5 ರಿಂದ ರಾತ್ರಿ 12ರವರೆಗೆ ಮಂಗಳಾರತಿ, ಭಜನೆ, ಅಭಿಷೇಕ, ನೃತ್ಯ, ಪೂರಕ, ಪ್ರವಚನ ಕಾರ್ಯಕ್ರಮಗಳು ನಡೆದವು.

## ಜಿಲ್ಲಾಡಳಿತದಿಂದ ಶ್ರೀ ಕೃಷ್ಣ ಜಯಂತಿ ಸರಳ ಆಚರಣೆ



ದಾವಣಗೆರೆ, ಆ.26- ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಶ್ರೀ ಕೃಷ್ಣ ಜಯಂತಿಯನ್ನು ಅತ್ಯಂತ ಸರಳವಾಗಿ ಆಚರಿಸಲಾಯಿತು.

ಶ್ರೀ ಕೃಷ್ಣನ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ ಅವರು ಪುಷ್ಪಾರ್ಚನೆ ಮಾಡುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿ ಶ್ರೀ ಕೃಷ್ಣ ಜಯಂತಿಯ ಶುಭಾಶಯ ಕೋರಿದರು.

ಅಪರ ಜಿಲ್ಲಾಧಿಕಾರಿ ಲೋಕೇಶ್. ಪಿ.ಎನ್, ಆಹಾರ ಇಲಾಖೆಯ ಉಪನಿರ್ದೇಶಕ ಸಿದ್ದರಾಮ ಮಾರಿಹಾಳ್, ನಿವೃತ್ತ ಪ್ರಾಚಾರ್ಯ ಶ್ರೀನಿವಾಸ್, ಯಾದವ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ಕಾರ್ಯದರ್ಶಿ ಗಂಗಾಧರಪ್ಪ, ಯಾದವ ಸಮಾಜ ಬಾಂಧವರು ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾಯರ ಆರಾಧನೆಯಲ್ಲಿ ನವಶಕ್ತಿ ನಮನ ನೃತ್ಯರೂಪಕ



ದಾವಣಗೆರೆ, ಆ. 27 - ಇಲ್ಲಿನ ಕೆ.ಬಿ. ಬಡಾವಣೆಯ ರಾಯರ ಮಠದಲ್ಲಿ ಕಳೆದ ವಾರ ನಡೆದ ರಾಯರ 353ನೇ ಆರಾಧನಾ ಮಹೋತ್ಸವದಲ್ಲಿ ನವದುರ್ಗೆಯರ ವೈಶಿಷ್ಟ್ಯತೆಯ ಹಾಗೂ ಅವರ ಹುಟ್ಟಿನ ಕಾರಣವನ್ನು ಕುರಿತು ನವಶಕ್ತಿ ನಮನ ಎಂಬ ನೃತ್ಯರೂಪಕ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ದಸರಾ ಹಬ್ಬದಲ್ಲಿ ಒಂಬತ್ತು ದಿನಗಳಲ್ಲಿ 9 ದುರ್ಗೆಯರನ್ನು ಪೂಜಿಸುತ್ತೇವೆ. ಪ್ರತಿದಿನದ ದುರ್ಗೆಯರು ಅವರು ಏಕೆ ಈ ಅವತಾರವನ್ನು ತಾಳಿದರು ಮತ್ತು ಅವರ ವಿಶೇಷತೆ ಏನು, ಅವರು ಯಾವ ಬಣ್ಣವನ್ನು ಧರಿಸಿರುತ್ತಾರೆ. ಇದರ ಬಗ್ಗೆ ಹಾಗೂ ಆ ದುರ್ಗೆಯ ಅವತಾರವನ್ನು ತಾಳಲು ಉದ್ದೇಶವೇನೆಂದು ಪ್ರತಿ ದುರ್ಗೆಯರ ನೃತ್ಯದಲ್ಲಿ ಅಭಿನಯದ ಮೂಲಕ ವಿವರಿಸಲಾಗಿದೆ.

ನಗರದ ನಮನ ಅಕಾಡೆಮಿಯ ಗುರು ವಿದುಷಿ ಶ್ರೀಮತಿ ಮಾಧವಿ ಡಿ.ಕೆ. ಮತ್ತು ಶಿಷ್ಯ ವೃಂದದವರು ಈ ಕಾರ್ಯಕ್ರಮ ನಡೆಸಿಕೊಟ್ಟರು.


**REQUIRED**

Young lady with minimum SSLC qualification is required to **take care of two and half year boy.**

***Apply with biodata with reference***

***Contact no. : 96861 95323***

**Shanthala,** Chamrajpet Davangere.


## ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಆದೇಶ

ದಾವಣಗೆರೆ, ಆ.26 - ರಾಜ್ಯದಲ್ಲಿ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯು ಪರಿಸರಕ್ಕೆ ಹಾನಿ ಮತ್ತು ಮಾನವ ಮತ್ತಿತರೆ ಪ್ರಾಣಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗಿರುವಂತಹ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ - ಲೋಟ, ಪ್ಲಾಸ್ಟಿಕ್ ಚಮಚಗಳು, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆಗಳು ಮತ್ತು ಥರ್ಮಕೋಲ್‌ನಂತಹ ಏಕಬಳಕೆ ಪ್ಲಾಸ್ಟಿಕ್‌ನ ವಸ್ತುಗಳ ದಾಸ್ತಾನು, ವಿತರಣೆ ಹಾಗೂ ಏಕ ಬಳಕೆ ಪ್ಲಾಸ್ಟಿಕ್‌ಗಳ ಬಳಕೆಯನ್ನು ನಿಷೇಧಿಸಲಾಗಿರುತ್ತದೆ.

ಕರ್ನಾಟಕ ನಗರಪಾಲಿಕೆಗಳ (ಬಿ.ಬಿ.ಎಂ.ಪಿ ಹೊರತುಪಡಿಸಿ) ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳ ಅಕ್ರಮ ಮಾರಾಟ, ದಾಸ್ತಾನು ಸಂಗ್ರಹಣೆ ಹಾಗೂ ಬಳಕೆ ಕಂಡುಬಂದಲ್ಲಿ ಕಾನೂನಾತ್ಮಕ ಕ್ರಮ ಕೈಗೊಂಡು ದಂಡ ವಿಧಿಸಲಾಗುವುದು ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳೀಸಿದ್ದಾರೆ.

## ಕೆಎಎಸ್ ಪರೀಕ್ಷೆ, ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ

ದಾವಣಗೆರೆ, ಆ.26 - ನಾಳೆ ದಿನಾಂಕ 27 ರಂದು ನಗರದ 14 ಪರೀಕ್ಷಾ ಕೇಂದ್ರಗಳಲ್ಲಿ ಗೆಜೆಟೆಡ್ ಪ್ರೊಬೇಷನರ್ಸ್ ವೃಂದದ ಹುದ್ದೆಗಳ ಪೂರ್ವಭಾವಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ.

ಈ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ 144 ಸೆಕ್ಷನ್ ಜಾರಿಗೊಳಿಸಿ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಆದೇಶಿಸಿರುತ್ತಾರೆ.


।। ಶ್ರೀ ಸಿದ್ದೇಶ್ವರ ಪ್ರಸನ್ನ ।।

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ।। ವಡ್ಡಿನಹಳ್ಳಿ ಗ್ರಾಮದ ವಾಸಿ
ದಿ।। ಶ್ರೀ ಉಳ್ಳಾಗಡ್ಡೆ ಮಹೇಶ್ವರಪ್ಪನವರ
ಮಕ್ಕಳಾದ
ಶ್ರೀ ಉಳ್ಳಾಗಡ್ಡೆ ಮರುಳಸಿದ್ದಪ್ಪ
ಮತ್ತು ಸಹೋದರರು
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 19.08.2024ನೇ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಉಳ್ಳಾಗಡ್ಡೆ ಬಸಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 27.08.2024ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ।। ವಡ್ಡಿನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಉಳ್ಳಾಗಡ್ಡೆ ಮರುಳಸಿದ್ದಪ್ಪ
ಶ್ರೀ ಉಳ್ಳಾಗಡ್ಡೆ ಬಸವರಾಜಪ್ಪ, ಶ್ರೀಮತಿ ಉಳ್ಳಾಗಡ್ಡೆ ಸರೋಜಮ್ಮ ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು
ಉಳ್ಳಾಗಡ್ಡೆ ವಂಶಸ್ಥರು, ವಡ್ಡಿನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು
ಫೋ. : 96636 64382, 94816 03461
ವಿ. ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಕುಕ್ಕವಾಡದ ಶ್ರೀ ಡಿ.ಸಿ. ಸುರೇಶ್ ನಿಧನ**



ಕುಕ್ಕವಾಡ ಗ್ರಾಮದ ದಾವಣಗೆರೆ ಸಿಟಿ ನಿಟುವಳ್ಳಿ ವಾಸಿ.
ಲಿಂ।। ಪ್ರಮೀಳಮ್ಮ ಲಿಂ।। ಡಿ.ಕೆ. ಚನ್ನಬಸಪ್ಪ ಇವರ ಸೊಸೆಯಾದ
ಶ್ರೀಮತಿ ಡಿ.ಎಸ್. ಸಾವಿತ್ರರವರ ಪೂಜ್ಯ ಪತಿಯವರಾದ
**ಶ್ರೀ ಡಿ.ಸಿ. ಸುರೇಶ್**
ಇವರು ದಿನಾಂಕ : 26.08.2024ರ ಸೋಮವಾರ ಬೆಳಗ್ಗೆ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿದ್ದು, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದು, ಮೃತರ ಪಾರ್ಥಿವ ಶರೀರವನ್ನು ಬೆಳಗ್ಗೆ 10.00 ಗಂಟೆಯವರೆಗೆ ನಿಟುವಳ್ಳಿ ಗೃಹದಲ್ಲಿ ಇರಿಸಲಾಗುವುದು. ನಂತರ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 27.08.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮ ಕುಕ್ಕವಾಡ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತ ಕುಟುಂಬ ವರ್ಗ, ಮೊ. : 72049 18868



।। ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ।।

**ಕೈಲಾಸ ಶಿವಗಣಾರಾಧನೆ ಆಹ್ವಾನ**

ದಾವಣಗೆರೆ ಸಿಟಿ ಶಾಮನೂರು ವಾಸಿ
ಕರೇಗೌಡ್ರ ಶ್ರೀ ರಮೇಶ್ ಕೆ.ಪಿ. ಮತ್ತು ಸಹೋದರರು ಹಾಗೂ ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 15.08.2024ನೇ ಗುರುವಾರ ಬೆಳಗಿನಜಾವ 3.30ಕ್ಕೆ ನನ್ನ ಧರ್ಮಪತ್ನಿ



**ಶ್ರೀಮತಿ ಕರೇಗೌಡ್ರ ವಿಶಾಲಮ್ಮನವರು**
ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 27-08-2024ರ ಮಂಗಳವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಕರೇಗೌಡ್ರ ಶ್ರೀ ರಮೇಶ್ ಕೆ.ಪಿ. ಮತ್ತು ಸಹೋದರರು ಹಾಗೂ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,
ಕರೇಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. 80508-59849
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas